ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿ

ಮಂಗಳೂರು ಡಿಸೆಂಬರ್ 1–15: 2025 ಸಂಪುಟ 2, ಸಂಚಿಕೆ 9, ಪುಟಗಳು–8 REG.No.MAG/CR27/2023/E-243218 Posted at Pandeshwar RNI:KARKAN28322 www.ullalavani.com ullalavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ
ಕಡಲ ಮಗಲ್

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಉಳ್ಳಾಲ ವಾಣಿ
ಅಪ್ಪಚ್ಚಿ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 ನಾರಾಯಣ ಗುರುಗಳ ಕಾರ್ಯಕ್ರಮ ಯಶಸ್ವಿಗೊಳಿಸಲು ಕುಂಪಲ ಕರೆ
ಪುಟ 3 ಅಗಲಿದ ಹಿರಿಯ ಬಿಜೆಪಿ ನಾಯಕಿ ಲಲಿತಾ ಸುಂದರ್‌ಗೆ ನುಡಿನಮನ
ಪುಟ 4 ಶತಮಾನದ ಮಹಾಪ್ರಸ್ಥಾನ ವಿಶೇಷ ಸಂಚಿಕೆ
ಪುಟ 6 ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್ ಸೇರಿದ ಶೋಢಶಿ ಫೌಂಡೇಶನ್

## ಸ್ಪೀಕರ್ ಯು.ಟಿ. ಖಾದರ್‌ಗೆ ಸಚಿವ ಸ್ಥಾನ?

### ಲೋಕೋಪಯೋಗಿಯೋ, ಕೈಗಾರಿಕೆಯೋ? ಕುತೂಹಲದಲ್ಲಿ ಇಲಾಖೆ ಪಟ್ಟ

**ಉಳ್ಳಾಲ:** ಯು.ಟಿ. ಖಾದರ್ ಅವರು ಸ್ಪೀಕರ್ ಆಗಿ ಎರಡೂವರೆ ವರ್ಷ ಪೂರೈಸಿದ ಸಂದರ್ಭದಲ್ಲಿ ಮುಂದೇನು ಎಂಬ ಪ್ರಶ್ನೆ ಇದೀಗ ರಾಜಕೀಯ ವಲಯದಲ್ಲಿ ಹೆಚ್ಚು ಚರ್ಚೆಯಾಗುತ್ತಿದೆ. ಸ್ಪೀಕರ್ ಹುದ್ದೆಯನ್ನು ಅವರು ಅತ್ಯಂತ ಸಮತೋಲನದಿಂದ ನಿರ್ವಹಿಸಿದ್ದು, ಯಾವುದೇ ವಿವಾದವಿಲ್ಲದ, ಎಲ್ಲರನ್ನೂ ಸಮಾನವಾಗಿ ಕೇಳುವ, ಸುಧಾರಿತ ವಿಧಾನಸಭಾ ಕಾರ್ಯಾಚರಣೆ ನಡೆಸುವ ಶೈಲಿಯಿಂದ ಪಕ್ಷದ ಒಳಗೂ ಹೊರಗೂ ಗೌರವ ಪಡೆದಿದ್ದಾರೆ. ಇಂತಹ ನಾಯಕನನ್ನು ಮತ್ತೆ ಸಚಿವ ಸಂಪುಟಕ್ಕೆ ತರಬೇಕೆಂಬ ಒತ್ತಾಯ ಪಕ್ಷದೊಳಗಿದೆ ಎಂಬುದು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿರುವ ಮಾತು.

ಆದರೆ ಖಾದರ್ ಅವರಿಗೆ ಯಾವ ಮಂತ್ರಿಪದ ಸಿಗಬಹುದು ಎಂಬುದು ಸರಳ ಲೆಕ್ಕಾಚಾರವಲ್ಲ. ಕೈಗಾರಿಕಾ ಇಲಾಖೆ ಅವರಿಗೆ ಸೂಕ್ತವಾಗಬಹುದು ಎಂಬ ಅಭಿಪ್ರಾಯವಿದೆ. ಕಾರಣ ಸಂವಹನ ಕೌಶಲ, ಹೂಡಿಕೆದಾರರೊಂದಿಗೆ ಸುಲಭ ಸಂವಾದ, ವಿವಾದವಿಲ್ಲದ ಆಡಳಿತ ಶೈಲಿ. ಕರಾವಳಿ ಪ್ರದೇಶದ ಪ್ರತಿನಿಧಿಯಾಗಿರುವುದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಹೊಸ ಯೋಜನೆಗಳಿಗೆ ಅವರು ಬಲ ಕೊಡಬಹುದಾದ್ದರಿಂದ ಪಕ್ಷವೂ ಈ ಆಯ್ಕೆಯನ್ನು ಪರಿಗಣಿಸಬಹುದು. ಆದರೆ ಈ ಇಲಾಖೆಗೆ ಸಾಮಾನ್ಯವಾಗಿ ದೊಡ್ಡ ರಾಜಕೀಯ ತೂಕ ಹೊಂದಿರುವ ಅಥವಾ ವ್ಯಾಪಕ ಆಡಳಿತ ಅನುಭವ ಇರುವ ನಾಯಕರನ್ನೇ ತರಲು ಪಕ್ಷಗಳು ಆಸಕ್ತಿ ತೋರಿಸುತ್ತವೆ. ಈ ಅಂಶವು ಖಾದರ್ ಅವರಿಗೆ ಅಡ್ಡಿಯಾಗುವ ಸಾಧ್ಯತೆ ಇದೆ.

**ಸಮತೋಲನದ ಪ್ರತೀಕ**

**ಸ್ಪೀಕರ್ ಹುದ್ದೆಯಿಂದ ರಾಜೀನಾಮೆ ನೀಡಿ ಸಚಿವ ಸಂಪುಟಕ್ಕೆ ಸೇರುವುದು ತಾಂತ್ರಿಕವಾಗಿ ಸಾಧ್ಯ. ಆದರೆ ಅದು ಸರ್ಕಾರದ ಸ್ಥಿರತೆ, ಸಚಿವ ಸ್ಥಾನಗಳ ಲಭ್ಯತೆ ಮತ್ತು ಪಕ್ಷದ ಒಳಗಿನ ಸಮೀಕರಣಗಳ ಮೇಲೆ ಅವಲಂಬಿತ. ಖಾದರ್ ಅವರನ್ನು ವಿಧಾನಸಭೆಯ ಸಮತೋಲನದ ಪ್ರತೀಕವಾಗಿ ಕಂಡಿರುವ ಪಕ್ಷ, ಮುಂದಿನ ಚುನಾವಣೆಗೆ ಪುನಃ ಆಡಳಿತ ಮುಖವನ್ನಾಗಿಸುವ ಬಯಕೆಯಲ್ಲಿ ಸರಕಾರವಿರುವುದರಿಂದ ಸಾಧ್ಯ.**




ಲೋಕೋಪಯೋಗಿ ಇಲಾಖೆ ಕೂಡ ಅವರಿಗೆ ನೀಡಬಹುದಾದ ಆಯ್ಕೆಯಾಗಿದೆ. ಇದು ದೊಡ್ಡ ಮತ್ತು ಪ್ರಭಾವಿ ಇಲಾಖೆ. ಕರಾವಳಿ ಮೂಲಸೌಕರ್ಯ ಅಭಿವೃದ್ಧಿಗೆ ಖಾದರ್ ಅವರ ಬಳುವಳಿ ಸಹಕಾರಿ ಆಗಬಹುದು. ಆದರೆ PWD ರಾಜಕೀಯವಾಗಿ ಆರ್ಥಿಕ ಬಲದ ಹುದ್ದೆಯೂ ಆಗಿರುವುದರಿಂದ, ಪಕ್ಷವು ಆಂತರಿಕ ಲೆಕ್ಕಾಚಾರಗಳನ್ನು ಗಮನಿಸಲೇಬೇಕು. ಖಾದರ್ ಅವರ ನಿಷ್ಕಳಂಕ ಮತ್ತು ವಿನಮ್ರ ರಾಜಕೀಯ ಶೈಲಿ ಈ ಇಲಾಖೆಯ ಖಾದರ್ ಅವರಿಗೆ ನಿಭಾಯಿಸಲು ಸಾಧ್ಯ. ಡಿಸಿಎಂ ಹುದ್ದೆಗೆ ಅವರನ್ನು

↘ 2ನೇ ಪುಟಕ್ಕೆ

## ಕೆಂಪುಕಲ್ಲು ರಾಜಧನ ಇಳಿಕೆಯಿಂದ ಮುಂದಿನ 2 ತಿಂಗಳಲ್ಲಿ ದರ ಮತ್ತಷ್ಟು ಇಳಿಕೆ

**ಮಂಗಳೂರು:** ಕೆಂಪುಕಲ್ಲಿನ ಮಾರುಕಟ್ಟೆ ದರದಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಇಳಿಕೆ ರಾಜ್ಯ ಸರ್ಕಾರದ ರಾಜಧನ ಕಡಿತ ಹಾಗೂ ಹೊಸ ಪರವಾನಿಗೆಗಳ ಮಂಜೂರಾತಿಯಿಂದ ನೇರವಾಗಿ ಸಂಬಂಧ ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಂಪುಕಲ್ಲು ಪಾಯಗಳ ಮಾಲಕರ ಒಕ್ಕೂಟದ ಪ್ರಕಾರ, ಈಗಾಗಲೇ ಮಾರುಕಟ್ಟೆಯಲ್ಲಿ ದರ ಇಳಿಕೆಯ ಲಕ್ಷಣ ಗೋಚರಿಸುತಿದ್ದು ಮುಂದಿನ ಎರಡು ತಿಂಗಳಲ್ಲಿ ದರ ಮತ್ತಷ್ಟು ಸ್ಥಿರವಾಗಿ ಕಡಿಮೆಯಾಗಲಿದೆ. ಸರ್ಕಾರವು ಹಿಂದೆ ಹೆಚ್ಚಿಸಿದ್ದ ರಾಜಧನವನ್ನು 256 ರೂ.ಗಳಿಂದ ಮರುಪರಿಶೀಲನೆ ಮಾಡಿ 97 ರೂಪಾಯಿಗೆ ಇಳಿಸಿದ ಕ್ರಮದಿಂದ ಪಾಯ ಮಾಲಕರ ಆರ್ಥಿಕ ಭಾರ ಕಡಿಮೆಯಾಗಿ, ಉತ್ಪಾದನಾ ವೆಚ್ಚದಲ್ಲೂ ಇಳಿಕೆ ಕಂಡು ಬಂದಿದೆ.



ಹಿಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ 242 ಪಾಯಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿದ್ದವು. ಆಗ ಪರವಾನಿಗೆ ಪಡೆಯುವ ಪ್ರಕ್ರಿಯೆ ಸರಳವಾಗಿದ್ದು ನಿಯಮಗಳು ಕಡಿಮೆ ಮಟ್ಟದಲ್ಲಿದ್ದರಿಂದ ಗಣಿಗಾರಿಕೆ ವ್ಯಾಪಕವಾಗಿತ್ತು. ಆದರೆ ಇತ್ತೀಚೆಗೆ ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳು ಪರವಾನಿಗೆಗಳ ಸಂಖ್ಯೆಯನ್ನು ದೊಡ್ಡ ಮಟ್ಟದಲ್ಲಿ ಸೀಮಿತಗೊಳಿಸಿವೆ. ನಕ್ಷೆ ತಯಾರಿಸಿ ಭೂ ದಾಖಲೆ ಇಲಾಖೆಗೆ ಸಲ್ಲಿಸುವುದರಿಂದ ಆರಂಭವಾಗಿ, ಗಣಿ ಮತ್ತು ಕಂದಾಯ ಇಲಾಖೆಗಳ ಜಂಟಿ ಸಮೀಕ್ಷೆ, ಕಲ್ಲು ದೊರೆಯದಿದ್ದರೆ ಮರು ಅರ್ಜಿ, ಗಣಿಗಾರಿಕೆ ಬಳಿಕ ಕಂದಕಗಳನ್ನು ಮಣ್ಣು ತುಂಬಿಸಿ ತೋಟಗಾರಿಕೆಗೆ ಅಥವಾ ಕೃಷಿಗೆ ಅನುಕೂಲವಾಗುವಂತೆ ಪುನರ್‌ವಿಕಸನೆ ಪ್ರಕ್ರಿಯೆಯನ್ನು ಇಂತಹ ಹಂತಗಳು ಸಮಯೋಪಯೋಗಿ ಹಾಗೂ ವೆಚ್ಚಭರಿತವಾಗಿಸಿವೆ. ಈ ನಿಯಮಗಳ ಪರಿಣಾಮವಾಗಿ ಈಗ ಜಿಲ್ಲೆಯಲ್ಲಿ ಕೇವಲ 55 ಪಾಯಗಳಿಗೆ ಮಾತ್ರ ಪರವಾನಿಗೆ ದೊ–ರೆತಿದೆಯಾದರೂ, 29 ಪಾಯಗಳು ಇನ್ನೂ ಪ್ರಕ್ರಿಯೆಯಲ್ಲಿ ಸಾಗುತ್ತಿವೆ. ಈ ಅರ್ಜಿಗಳಿಗೆ ಸಹ ಅನುಮತಿ ದೊರೆತರೆ ಜಿಲ್ಲೆಯಲ್ಲಿ ಕೆಂಪುಕಲ್ಲಿನ ಒಟ್ಟು ಉತ್ಪಾದನಾ ಸಾಮರ್ಥ್ಯ ಮತ್ತೆ ಏರಿಕೆ ಕಾಣಲಿದೆ.

### ಕಟ್ಟುನಿಟ್ಟಿನ ಕ್ರಮದಿಂದಾಗಿ ಪರವಾನಿಗೆ ಸೀಮಿತಗೊಂಡಿದೆ: ಕೆಂಪು ಕಲ್ಲು ಪಾಯಗಳ ಮಾಲಕರ ಒಕ್ಕೂಟ



ರಾಜ್ಯ ಸರಕಾರ ಈಗಾಗಲೇ ರಾಜಧನ ಇಳಿಕೆ ಮಾಡಿದ್ದರಿಂದ ಕೆಂಪು ಕಲ್ಲಿನ ದರ ಇಳಿಕೆಯ ಹಾದಿಯಲ್ಲಿದೆ. ಕೆಂಪು ಕಲ್ಲು ಗಣಿಗಾರಿ–ಕೆಗೆ ಇನ್ನಷ್ಟು ಪರವಾನಿಗೆಗಳು ಲಭ್ಯವಾದಂತೆ ಮುಂದಿನ ಎರಡು ತಿಂಗಳಲ್ಲಿ ದರವೂ ಇಳಿಕೆಯಾಗಲಿದೆ ಎಂದು ದ.ಕ. ಜಿಲ್ಲಾ ಕೆಂಪು ಕಲ್ಲು ಪಾಯಗಳ ಮಾಲಕರ ಒಕ್ಕೂಟ ತಿಳಿಸಿದೆ.

ನಗರದ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಸತೀಶ್ ಆಚಾರ್ಯ, ಹಿಂದೆ 242ರಷ್ಟು ಕೆಂಪುಕಲ್ಲು ಪಾಯಗಳಿಗೆ ಪರವಾನಿಗೆ ಇದ್ದು, ಇಷ್ಟೊಂದು ನಿಯಮಗಳೂ ಇರಲಿಲ್ಲ. ಕಳೆದ ಆರು ತಿಂಗಳಿನಿಂದೀಚೆಗೆ ಸರಕಾರದ ಕಟ್ಟುನಿಟ್ಟಿನ ಕ್ರಮದಿಂದಾಗಿ ಪರವಾನಿಗೆ ಸೀಮಿತಗೊಂಡಿದೆ. ಈಗಾಗಲೇ 55 ಕಡೆ ಕಲ್ಲು ಗಣಿಗಾರಿಕೆಗೆ ಪರವಾನಿಗೆ ದೊರಕಿದ್ದು, ಸುಮಾರು 29ರಷ್ಟು ಪರವಾನಿಗೆ ಪ್ರಕ್ರಿಯೆ ಹಂತದಲ್ಲಿದೆ. ಈ ಪರವಾನಿಗೆಗಳೂ ದೊ–ರೆತಾಗ ಈಗಾಗಲೇ ಇಳಿಕೆಯಾಗುತ್ತಾ ಸಾಗಿರುವ ಕೆಂಪುಕಲ್ಲಿನ ದರ ಇನ್ನಷ್ಟು ಇಳಿಕೆಯಾಗಲಿದೆ ಎಂದರು.

ಕೆಂಪುಕಲ್ಲಿಗೆ ಸಾಕಷ್ಟು ಬೇಡಿಕೆ ಹೊರತಾಗಿಯೂ ಪರವಾನಿಗೆ ಸೀಮಿತವಾಗಿರುವುದರಿಂದ ಸಾಗಾಟ ದರ ಹೆಚ್ಚಳವಾಗಿದೆ. ಕೋರೆಗಳಲ್ಲಿ ಈಗಾಗಲೇ ಎರಡು ವಿಧದ ಕಲ್ಲು ತಲಾ 35 ರೂ.ದರದೊಳಗೆ ನೀಡಲಾಗುತ್ತಿದೆ. ನಗರಕ್ಕೆ ಹತ್ತಿರದಲ್ಲಿ 12 ಪರವಾನಿಗೆಗಳು ಮಾತ್ರವೇ ಇದ್ದು, ಉಳಿದೆಲ್ಲವೂ ಸುಳ್ಯ, ಪುತ್ತೂರು ಕಡೆ ಇರುವುದರಿಂದ ಸಾಗಾಟ–ಕ್ಕೆ ಹೆಚ್ಚು ವೆಚ್ಚವಾಗುತ್ತಿದೆ ಎಂದವರು ಹೇಳಿದರು. ಪರವಾನಿಗೆ ಮಾಡಬೇಕಾದರೆ ನಕ್ಷೆ ಮಾಡಿ ಭೂ ದಾಖಲೆ ಅಧಿಕಾರಿಗಳಿಗೆ ಸಲ್ಲಿಸಿ ಗಣಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಂದ ಜಂಟಿ

↘ 2ನೇ ಪುಟಕ್ಕೆ

- **ಕೆಲವು ಮಾಸಗಳ ಹಿಂದೆ ಕೆಂಪುಕಲ್ಲಿನ ದರವು 35 ರೂಪಾಯಿಗಿಂತಲೂ ಹೆಚ್ಚಿನ ಮಟ್ಟಕ್ಕೆ ಏರಿಕೆಯಾಯಿತು.**
- **ಪ್ರಸ್ತುತ ಪರಿಸ್ಥಿತಿಯಲ್ಲಿ ಉತ್ಪಾದನಾ ವೆಚ್ಚ ಸರಾಸರಿ 28 ರೂ. ಆಗಿದ್ದು, ಕೋರೆಗಳಲ್ಲಿ 32 ರಿಂದ 35 ರೂ. ಒಳಗೆ ಕಲ್ಲು ಲಭ್ಯವಾಗುತ್ತಿದೆ.**

ಸದ್ಯ ಮಾರುಕಟ್ಟೆಯಲ್ಲಿ ಕಾಣುತ್ತಿರುವ ದರ ಸಮಸ್ಯೆಯ ಮತ್ತೊಂದು ಪ್ರಮುಖ ಕಾರಣವೆಂದರೆ ಸಾಗಾಟದ ವೆಚ್ಚ. ನಗರಕ್ಕೆ ಹತ್ತಿರದ ಕೇವಲ 12 ಪಾಯಗಳ ಹೊರತಾಗಿ ಉಳಿದ ಗಣಿಗಳು ಸುಳ್ಯ–ಪುತ್ತೂರಿನೊಳಗೆ ಇರುವುದರಿಂದ ಲಾರಿ ಸಾಗಾಟದ ವೆಚ್ಚ ಕಲ್ಲಿನ ಅಂತಿಮ ದರದ ಮೇಲೆ ಮಹತ್ತರ ಪರಿಣಾಮ ಬೀರುತ್ತಿದೆ. ಇದೇ ಕಾರಣದಿಂದ ಕೆಲವು ತಿಂಗಳ ಹಿಂದೆ ಕೆಂಪುಕಲ್ಲಿನ ದರವು 35 ರೂಪಾಯಿಗಿಂತಲೂ ಹೆಚ್ಚಿನ ಮಟ್ಟಕ್ಕೆ ಏರಿಕೆಯಾಯಿತು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಉತ್ಪಾದನಾ ವೆಚ್ಚ ಸರಾಸರಿ 28 ರೂ. ಆಗಿದ್ದು, ಕೋರೆಗಳಲ್ಲಿ 32 ರಿಂದ 35 ರೂ. ಒಳಗೆ ಕಲ್ಲು ಲಭ್ಯವಾಗುತ್ತಿದೆ. ಈ ಅಂತರವು ದೊಡ್ಡ ಲಾಭಾಂಶವಲ್ಲದಿದ್ದರೂ, ಪೂರೈಕೆ ನಿಧಾನವಾಗಿ ಹೆಚ್ಚುತ್ತಿರುವುದರಿಂದ ಮಾರುಕಟ್ಟೆ ಸ್ಥಿರತೆಯತ್ತ ಸಾಗುತ್ತಿದೆ.

ಒಂದು ಎಕರೆ ಪ್ರದೇಶದಲ್ಲಿ 16,000 ಟನ್ ಮುರಕಲ್ಲು

↘ 2ನೇ ಪುಟಕ್ಕೆ

## ವಿಧಾನಸಭಾಧ್ಯಕ್ಷ ಖಾದರ್‌ಗೆ ಗೌರವ ಡಾಕ್ಟರೇಟ್ ಪ್ರದಾನ




**ಉಳ್ಳಾಲ:** ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ಅವರಿಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರದಾನ ರಾಜಭವನದಲ್ಲಿ ನಡೆಯಿತು.

ಬೆಂಗಳೂರು ವಿ.ವಿಯ ಕುಲಾದಿಪತಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ವಿ.ವಿ ಉಪಕುಲಪತಿ ಡಾ। ಜಯಕರ ಎಸ್.ಎಂ ಕುಲಸಚಿವೆ ಕೆ.ಟಿ ಶಾಂತಾಳಾ ಮತ್ತಿತರರು ಉಪಸ್ಥಿತರಿದ್ದರು.

ಬಿ.ಎ, ಎಲ್.ಎಲ್.ಬಿ ಪದವೀಧರರಾಗಿರುವ ಅವರು ಉಳ್ಳಾಲದ ಮಾಜಿ ಶಾಸಕ ದಿ। ಯು.ಟಿ.ಫರೀದ್ ಅವರ ಪುತ್ರ. ಎನ್.ಎಸ್.ಯು.ಐ ಯುವ ಕಾಂಗ್ರೆಸ್ ಹಾಗೂ ಸೇವಾದಳಗಳ ಮೂಲಕ ಸಾರ್ವಜನಿಕರ ಜೀವನ ಪ್ರವೇಶಿಸಿದ ಖಾದರ್ ಅವರು ಮಂಗಳೂರು ವಿಧಾನ ಸಭಾ ಕ್ಷೇತ್ರವನ್ನು ಸತತ ಐದು ಬಾರಿ ಶಾಸಕರಾಗಿ ಪ್ರತಿನಿಧಿಸಿದ್ದಾರೆ.

ರಾಜ್ಯ ಸರಕಾರದಲ್ಲಿ ಆರೋಗ್ಯ, ಆಹಾರ, ವಸತಿ ಹಾಗೂ ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಪ ನಾಯಕರಾಗಿದ್ದ ಅವರು 2023ರಿಂದ ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಮಂಜನಾಡಿ ಗುಡ್ಡ ಕುಸಿತ ದುರಂತ**

## ಜಿಲ್ಲಾಡಳಿತದಿಂದ ಎನ್‌ಐಟಿಕೆಗೆ ತಾಂತ್ರಿಕ ತನಿಖೆ ಹಸ್ತಾಂತರ

**ಮಂಗಳೂರು:** ಮಂಗಳೂರು ತಾಲೂಕಿನ ಮಂಜನಾಡಿ ಗ್ರಾಮದಲ್ಲಿ ಮೇ 30, 2025 ರಂದು ಸಂಭವಿಸಿದ ಭಯಾನಕ ಗುಡ್ಡ ಕುಸಿತ ದುರಂತದಲ್ಲಿ ಮೂವರು ಸಾವು, ಇಬ್ಬರಿಗೆ ಗಂಭೀರ ಅಂಗವೈಕಲ್ಯ ಉಂಟಾದ ಪ್ರಕರಣ–ಕ್ಕೆ ತಿರುವು ಸಿಕ್ಕಿದೆ. ಪೀಡಿತ ಕುಟುಂಬದ ತೀವ್ರ ಮನವಿ, ಮಾಧ್ಯಮಗಳಲ್ಲಿ ಬಂದ ಕರುಣಾಜನಕ ವರದಿಗಳು ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗದ ಒತ್ತಡದ ನಂತರ ದಕ್ಷಿಣ ಕನ್ನಡ ಜಿಲ್ಲಾಡಳಿತವು ಪ್ರಕರಣದ ತಾಂತ್ರಿಕ ತನಿಖೆಯನ್ನು ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (NITK) ತಜ್ಞರ ತಂಡಕ್ಕೆ ಅಧಿಕೃತವಾಗಿ ಹಸ್ತಾಂತರಿಸಿದೆ.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನರ್ವಡೆ ವಿನಾಯಕ್ ಕಾರ್ಭಾರಿ (ಭಾ.ಆ.ಸೇ.) ಅವರು NITK ನಿರ್ದೇಶಕರು ಹಾಗೂ ಸಂಬಂಧಿತ ಇಲಾಖಾಧಿಪತಿಗಳಿಗೆ ಪತ್ರ ಬರೆದು, "ವಸ್ತುನಿಷ್ಠ, ವೈಜ್ಞಾನಿಕ ಮತ್ತು ಸತ್ಯಶೋಧನಾ ವರದಿ"ಯನ್ನು ಶೀಘ್ರದಲ್ಲೇ ಸಲ್ಲಿಸುವಂತೆ ವಿನಂತಿಸಿದ್ದಾರೆ.

ಮೃತ ಇಬ್ಬರು ಮಕ್ಕಳಿಗೆ ತಲಾ ರೂ.5 ಲಕ್ಷ (ಒಟ್ಟು ರೂ.10 ಲಕ್ಷ) ಅಶ್ವಿನಿಯವರ ಎರಡು ಕಾಲುಗಳಿಗೆ ರೂ.2 ಲಕ್ಷ, ಮಾವನ ಒಂದು ಕಾಲಿಗೆ ರೂ.1 ಲಕ್ಷ ಈ ಮೊತ್ತಕ್ಕೆ

**ಆಘಾತ ಮೂಡಿಸಿದ್ದ ಘಟನೆ**

**ಮೇ 30ರ ಬೆಳಗ್ಗೆ ಭಾರಿ ಮಳೆಯ ನಡುವೆಯೇ ಸುಮಾರು 70 ಅಡಿ ಎತ್ತರದ ಗುಡ್ಡದ ದೊಡ್ಡ ಭಾಗ ಕುಸಿದು ಪೀಡಿತ ಕುಟುಂಬದ ಮನೆಯ ಮೇಲೆ ಬಿದ್ದ ಪರಿಣಾಮ ಇಬ್ಬರು ಮಕ್ಕಳು ಹಾಗೂ ಅಜ್ಜಿ ಸ್ಥಳದಲ್ಲೇ ಮೃತಪಟ್ಟರು. ಮನೆಯ ಯಜಮಾನಿ ಅಶ್ವಿನಿ ಅವರ ಎರಡೂ ಕಾಲುಗಳು ಸಂಪೂರ್ಣ ತುಂಡಾಗಿ ಅಂಗವೈಕಲ್ಯ ಮಾವ ಶ್ರೀನಿವಾಸ್ ಅವರಿಗೂ ಒಂದು ಕಾಲು ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆ ರಾಜ್ಯಾದ್ಯಂತ ಆಘಾತ ಮೂಡಿಸಿದ್ದು, ಸಚಿವರು, ಶಾಸಕರು, ಸಂಸದರು ಸ್ಥಳಕ್ಕೆ ಭೇಟಿ ನೀಡಿ ಸಂತಾಪ ಸೂಚಿಸಿದ್ದರು.**

ಪೀಡಿತ ಕುಟುಂಬ ಹಾಗೂ ಸ್ಥಳೀಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೂರು ಜೀವಗಳಿಗೆ ಮತ್ತು ಇಬ್ಬರ ಜೀವಿತಾವಧಿ ಅಂಗವೈಕಲ್ಯಕ್ಕೆ ಇಷ್ಟೇನಾ? ಇದು ಪರಿಹಾರವಲ್ಲ, ಎಂದು ಆಕ್ರೋಶ ವ್ಯಕ್ತವಾಗಿತ್ತು.

**ಅವೈಜ್ಞಾನಿಕ ಕಾಮಗಾರಿಯೇ ಕಾರಣ:** ಪೀಡಿತ ಕುಟುಂಬದ ಪ್ರಕಾರ ಮನೆಯ

↘ 2ನೇ ಪುಟಕ್ಕೆ

## ಕಾಲುಸಂಕ ಕುಸಿತ ಸ್ಥಳಕ್ಕೆ ದೋಣಿಯಲ್ಲಿ ಸಂಚರಿಸಿದ ಜಿಲ್ಲಾಧಿಕಾರಿ ದರ್ಶನ್



**ಮಂಗಳೂರು:** ಕಾಲುಸಂಕ ಕುಸಿತ ಸ್ಥಳಕ್ಕೆ ದೋಣಿಯಲ್ಲಿ ಸಂಚರಿಸಿ ಜಿಲ್ಲಾಧಿಕಾರಿ ಎಚ್.ವಿ. ದರ್ಶನ್ ಪರಿಶೀಲನೆ ನಡೆಸಿದರಲ್ಲದೆ, ಕಾಲುಸಂಕ ಪುನಃ ನಿರ್ಮಾಣ ಅಥವಾ ದುರಸ್ತಿಯ ಬಗ್ಗೆ ತಾಂತ್ರಿಕ ಅಭಿಪ್ರಾಯ ಪಡೆದು ಶೀಘ್ರದಲ್ಲೇ ನಿರ್ಧರಿಸಲಾಗುವುದು ಎಂದು ತಿಳಿಸಿದ್ದಾರೆ. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ 54ರ ಉಳ್ಳಾಲ ಹೊಯಿಗೆ ಎಂಬಲ್ಲಿ ನೇತ್ರಾವತಿ ನದಿ ತೀರದಲ್ಲಿ ಕಾಲುದಾರಿಯ ಮೂಲಕ ಸಾರ್ವಜನಿಕರು ಸಂಚರಿಸಲು ಲೋಹದ ಕಾಲುಸಂಕವನ್ನು ಬಹಳ ವರ್ಷಗಳ ಹಿಂದೆ ನಿರ್ಮಿಸಲಾಗಿತ್ತು. 4 ವರ್ಷಗಳ

- **ಈ ಪ್ರದೇಶದಲ್ಲಿ ಸುಮಾರು 300ಕ್ಕೂ ಅಧಿಕ ಕುಟುಂಬಗಳು ವಾಸಿಸುತ್ತಿದ್ದು, ಕಾಲುಸಂಕದ ಮೂಲಕ ನದಿಬದಿಯಲ್ಲಿ ಸಮನಾಂತರವಾಗಿ ನಡೆದು ನಗರ ಸಂಪರ್ಕಿಸಲು ಹತ್ತಿರವಾಗಿತ್ತು.**

↘ 2ನೇ ಪುಟಕ್ಕೆ

## ಬೀದಿ ನಾಯಿ ಕಾಟದ ಚರ್ಚೆ, ಪರಿಹಾರಕ್ಕೆ ಕೌನ್ಸಿಲರ್‌ಗಳ ಒತ್ತಾಯ

**ಸೋಮೇಶ್ವರ ಸಾಮಾನ್ಯ ಸಭೆ**

**ಉಳ್ಳಾಲ:** ಸೋಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ವಿಪರೀತಗೊಂಡಿರುವ ನಾಯಿಗಳ ಕಾಟ ಮತ್ತದರ ಪರಿಹಾರದ ಬಗ್ಗೆ ಪುರಸಭೆ ಸಾಮಾನ್ಯ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಿತು.

ಸೋಮೇಶ್ವರ ಪುರಸಭೆ ಅಧ್ಯಕ್ಷ ಕಮಲ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಉಳ್ಳಾಲ ಸಬ್ ಇನ್ಸೆಕ್ಟರ್ ಸಂತೋಷ್ ಮಾತನಾಡಿ, ಕುಂಪಲ ಬೈಪಾಸ್ ಬಳಿ ವಾರದ ಹಿಂದೆ ನಡೆದ ದಯಾನಂದ್ ಅವರ ಅನುಮಾನಾಸ್ಪದ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಶವಪರೀಕ್ಷೆಗೆ ಕಳುಹಿಸಲಾಗಿದ್ದು, ಪ್ರಾಣಿಗಳ ದಾಳಿಯಿಂದ ಮುಖಕ್ಕೆ ಆಗಿರುವ ಗಾಯಗಳಿಂದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ತನಿಖೆ ಮುಂದುವರಿದಿದೆ. ಆರ್ ಎಫ್ ಎಸ್ ಎಲ್ ವರದಿ ಇನ್ನು ಬರಬೇಕಾಗಿದೆ ಎಂದು ಹೇಳಿದರು.



ನಾಯಿಗಳ ಕಾಟದ ಬಗ್ಗೆ ಸೂಕ್ತ ಚರ್ಚೆ ಮಾಡಿ ತೀರ್ಮಾನ ಆಗಬೇಕು ಎಂದು ಉಪಾಧ್ಯಕ್ಷ ರವಿಶಂಕರ್ ಹೇಳಿದರು. ಕುಂಪಲದಲ್ಲಿ ಒಂದು ಘಟನೆ ನಡೆದು ಹೋಗಿದೆ. ಸೋಮೇಶ್ವರ ವ್ಯಾಪ್ತಿಯಲ್ಲಿ ನಾಯಿಗಳ ಕಾಟ ಜಾಸ್ತಿ ಇದೆ. ಇದಕ್ಕೆ ಪರಿಹಾರ ಆಗಬೇಕು ಎಂದು ವಿರೋಧ ಪಕ್ಷದ ನಾಯಕ ಪುರುಷೋತ್ತಮ ಶೆಟ್ಟಿ ಒತ್ತಾಯಿಸಿದರು.

ಪಶು ಸಂಗೋಪನಾ ಇಲಾಖೆ ಅಧಿಕಾರಿ ರಚನಾ ಮಾತನಾಡಿ, ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಆಗುತ್ತದೆ. ನಾಯಿಗಳ ಬೆಳವಣಿಗೆ ಆಗದಂತೆ ಸಂತಾನ ಹರಣ ಚಿಕಿತ್ಸೆ ಆಗಿದೆ. ಬೀದಿ ನಾಯಿಗಳಿಗೆ ರಸ್ತೆ ಬದಿ ಊಟ ಹಾಕುತ್ತಾರೆ. ಇದರಿಂದ ನಾಯಿ ಅದೇ ಜಾಗದಲ್ಲಿ ಸೇರುತ್ತದೆ . ದಯಾನಂದ್ ಸಾವಿಗೆ ಕಾರಣ ಎನ್ನಲಾದ ನಾಯಿ ಹುಚ್ಚು ನಾಯಿ ಅಲ್ಲ ಎಂದು ಹೇಳಿದಾಗ ಸಭೆಯಲ್ಲಿ ಆಕ್ರೋಶ ವ್ಯಕ್ತವಾಯಿತು. ಮೊನ್ನೆ ನಡೆದ ಘಟನೆಯಿಂದ ಸೋಮೇಶ್ವರ ಪುರಸಭೆಗೆ ಕಪ್ಪು ಚುಕ್ಕೆ ಆಗಿದೆ. ಇನ್ನಾದರೂ ನಾಯಿಗಳ ನಿಯಂತ್ರಣ ಆಗಬೇಕು. ಸಾಂಕ್ರಾಮಿಕ ರೋಗಗಳು ತಡೆಗಟ್ಟುವ ಕೆಲಸ ಆಗಬೇಕು ಎಂದು ಸದಸ್ಯರು ಒತ್ತಾಯಿಸಿದರು.321 ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಆಗಿದೆ. ನಾಯಿಗಳ ಸಂಖ್ಯೆ ಜಾಸ್ತಿ ಇದೆ. ಪ್ರಾಣಿ ದಾಳಿಯಿಂದ ವ್ಯಕ್ತಿ ಮೃತಪಟ್ಟಿದ್ದಾರೆ ಎಂಬ ಶಂಕೆ ಅಧಿಕಾರಿಗಳಿಂದ ವ್ಯಕ್ತವಾಗಿದೆ. ಅಗತ್ಯ ಒದಗಿ ಬಂದಲ್ಲಿ ಐದು ಲಕ್ಷ ಪರಿಹಾರ ನೀಡಲು ತಯಾರಿದ್ದೇವೆ. ಸತ್ತ ನಾಯಿಗಳನ್ನು ಇಲಾಖೆ ಅಧಿಕಾರಿಗಳು ಜೊತೆ–ಗೂಡಿ ಕಾರ್ಯ ನಿರ್ವಹಣೆ ಮಾಡಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಆಗಬೇಕು ಎಂದು ಮುಖ್ಯಾಧಿಕಾರಿ ಮತ್ತಡಿ ಹೇಳಿದರು. ಈ ಬಗ್ಗೆ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಿತು.ಬೀರಿಯಲ್ಲಿ ಹೆದ್ದಾರಿಯಲ್ಲೇ ಬಸ್ ನಿಲ್ಲಿಸುತ್ತಾರೆ. ಈ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚೆ ಆಗಿತ್ತು. ಈ ವೇಳೆ ಸಂಚಾರಿ ಪೊಲೀಸರು ಮೇಲಧಿಕಾರಿಗಳಿಗೆ ತಿಳಿಸುತ್ತೇವೆ ಎಂದು ಭರವಸೆ ನೀಡಿದ್ದರು. ಇದರ ಬಳಿಕವೂ ಬಸ್ ಹೆದ್ದಾರಿಯಲ್ಲೇ ನಿಲುಗಡೆ ಆಗುತ್ತದೆ. ಉಚ್ಚಿಲದಲ್ಲೂ ಸರ್ವಿಸ್ ರಸ್ತೆಯಲ್ಲಿ ಬಸ್ ನಿಲುಗಡೆ ಮಾಡುವುದಿಲ್ಲ. ಇದಕ್ಕೆ ಕ್ರಮ ಆಗಬೇಕು ಎಂದು ಸಲಾಮ್ ಉಚ್ಚಿಲ ಒತ್ತಾಯಿಸಿದರು.

ಬಸ್ ನಿಲುಗಡೆ ವಿಚಾರದಲ್ಲಿ ಖಾಸಗಿ ಬಸ್ ಮಾಲಕರ ಸಂಘ ಇದೆ. ಅವರು ಜವಾಬ್ದಾರಿ ನಿರ್ವಹಿಸಬೇಕು. ಇಲಾಖೆ ವತಿಯಿಂದ ದಂಡ ವಿಧಿಸಿ ಪರವಾನಿಗೆ ರದ್ದು ಮಾಡಲು ಮಾತ್ರ ಸಾಧ್ಯ. ನಾವು ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರುತ್ತೇವೆ. ಕೊಲ್ಯದಲ್ಲಿ ಬಹಳಷ್ಟು ಅಂಗಡಿಗಳಿವೆ. ಸಿ.ಸಿ. ಕ್ಯಾಮರಾ ಅಳವಡಿಸುವಂತೆ ನೋಟೀಸ್ ನೀಡಲಾಗಿದೆ. ಆದರೂ ಸಿ.ಸಿ ಕ್ಯಾಮರಾ ವ್ಯವಸ್ಥೆ ಆಗಿಲ್ಲ.ಅಲ್ಲಿ ಯಾವುದೇ ಘಟನೆ ನಡೆದರೂ ಗೊತ್ತಾಗುತ್ತಿಲ್ಲ ಎಂದು ಉಳ್ಳಾಲ ಠಾಣಾ ಉಪ ನಿರೀಕ್ಷಕ ಸಂತೋಷ್ ಸಭೆಯ ಗಮನ ಸೆಳೆದರು. ಕೊಲ್ಯದಲ್ಲಿ ಸಿಸಿ ಕ್ಯಾಮೆರಾ ಇಲ್ಲದ ಅಂಗಡಿಗಳಿಗೆ ಉದ್ದಿಮೆ ಪರವಾನಿಗೆ ನೀಡಬಾರದು. ಅವರ ವಿರುದ್ಧ ಕ್ರಮ ಆಗಬೇಕು ಎಂದು ಮನೋಜ್ ಹೇಳಿದರು.ಈಗಾಗಲೇ ಡಿ ಮಾರ್ಟ್ ಗೆ ಸಿ.ಸಿ ಕ್ಯಾಮರಾ ಹಾಕಲು ಹೇಳಿದ್ದೇವೆ. ಅವರು ಹಾಕುತ್ತಾರೆ. ಒಂದು ವಾರದೊಳಗೆ 15 ಕಡೆ ಸಿ.ಸಿ ಕ್ಯಾಮರಾ ಹಾಕುವ ಕೆಲಸ ನಡೆಯಲಿದೆ ಎಂದು ಉಪಾಧ್ಯಕ್ಷ ರವಿಶಂಕರ್ ಹೇಳಿದರು.

- **ಸೋಮೇಶ್ವರ ವ್ಯಾಪ್ತಿಯಲ್ಲಿ ನಾಯಿಗಳ ಕಾಟ ಜಾಸ್ತಿ ಇದೆ. ಇದಕ್ಕೆ ಪರಿಹಾರ ಆಗಬೇಕು**
- **ಮೊನ್ನೆ ನಡೆದ ಘಟನೆಯಿಂದ ಸೋಮೇಶ್ವರ ಪುರಸಭೆಗೆ ಕಪ್ಪು ಚುಕ್ಕೆ ಆಗಿದೆ. ಇನ್ನಾದರೂ ನಾಯಿಗಳ ನಿಯಂತ್ರಣ ಆಗಬೇಕು.**
- **ಉಚ್ಚಿಲದಲ್ಲಿ ಸರ್ವಿಸ್ ರಸ್ತೆಯಲ್ಲಿ ಬಸ್ ನಿಲುಗಡೆ ಮಾಡುವುದಿಲ್ಲ. ಹೆದ್ದಾರಿಯಲ್ಲೇ ನಿಲುಗಡೆ ಆಗುತ್ತದೆ.**

## ಸಂಪಾದಕೀಯ

# ತುಳುನಾಡಿನ ಪ್ರತಿ ಮನೆಯ ಅಕ್ಷಯಪಾತ್ರೆ – 'ಬೀಡಿ ಸೂಪು': ಮರೆಯಾಗುತ್ತಿರುವ ಸಾವಿರಾರು ತಾಯಂದಿರ ಹಕ್ಕಿನ ಹೋರಾಟ



ತುಳುನಾಡಿನ ಮನೆಗಳಲ್ಲಿ ವರ್ಷಗಳಿಂದ ಜೀವಂತವಾಗಿರುವ ಒಂದು ಅಕ್ಷಯಪಾತ್ರೆ ಇದ್ದೇ ಇದೆ. ಬೀಡಿ ಕಟ್ಟುವ ಮಹಿಳೆಯರ 'ಬೀಡಿ ಸೂಪು'. ದೈನಂದಿನ ಜೀವನ ನಡೆಸಲು ಸಾವಿರಾರು ಮನೆಯ ಅಡಿಪಾಯವಾಗಿರುವ ಈ ಸೂಪು, ಅನೇಕ ಮಹಿಳೆಯ ಕೈಕೆಲಸ ಮತ್ತು ಅವರ ನಿಶ್ಯಬ್ದ ಹೋರಾಟದ ಸಂಕೇತ. ಬೆಳಗ್ಗಿನಿಂದ ಸಂಜೆಯವರೆಗೆ, ಮನೆಕಟ್ಟುವ ಜವಾಬ್ದಾರಿಗಳನ್ನು ನಿಭಾಯಿಸುತ್ತಾ, ನಿರಂತರವಾಗಿ ಕಟ್ಟುವ ಬೀಡಿ ಈ ಕುಟುಂಬಗಳ ಊಟಕ್ಕೆ, ಮಕ್ಕಳ ವಿದ್ಯಾಭ್ಯಾಸಕ್ಕೆ, ಅನೇಕ ಅಳಿಯದ ಅಗತ್ಯಗಳಿಗೆ ಜೀವಧಾರೆ.

ಆದರೆ 2017ರಲ್ಲಿ ಹೆಚ್ಚಳಗೊಂಡ ಕನಿಷ್ಠ ಕೂಲಿಯನ್ನು ಬೀಡಿ ಕಂಪನಿಗಳು ಇನ್ನೂ ಪೂರ್ಣವಾಗಿ ಪಾವತಿಸಿಲ್ಲ. ಕಾರ್ಮಿಕರಿಗೆ ನೀಡಬೇಕಿದ್ದ ಸುಮಾರು 3,000 ಕೋಟಿ ರೂಪಾಯಿ ಇನ್ನೂ ಬಾಕಿಯೇ ಉಳಿದಿದೆ. ಮಹಿಳೆಯರ ಕಷ್ಟಪಟ್ಟು ಗಳಿಸಿದ ಈ ಕೂಲಿಯನ್ನು ನೀಡುವುದರಲ್ಲಿ ನಿರ್ಲಕ್ಷ್ಯ ತೋರಿರುವ ಧಣಿಗಳು, ಬಲವಾದ ರಾಜಕೀಯ ಬೆಂಬಲದ ಆಧಾರದಲ್ಲಿ ಕಾನೂನುಗಳನ್ನು ಕಾಲಕಸ ಮಾಡುತ್ತಿರುವುದು ದೊಡ್ಡ ಅನ್ಯಾಯ, ದೊಡ್ಡ ವಂಚನೆ.

ಅನೇಕ ಬಾರಿ ಬೀಡಿ ಕಾರ್ಮಿಕರು ರಸ್ತೆಗಿಳಿದು ಹೋರಾಡಿದರು. ಅನೇಕ ಮನವಿಪತ್ರಗಳು, ವಿನಂತಿಗಳು ಅಧಿಕಾರಿಗಳ ಮೇಜಿನ ಮೇಲೆ ಬಿದ್ದರೂ, ಪ್ರತಿಕ್ರಿಯೆ ಮಾತ್ರ ಸಿಗಲಿಲ್ಲ. ಮೌನವೇ ಉತ್ತರವಾಗುತ್ತಿದೆ. ನೋವಿನ ಸಂಗತಿ ಏನೆಂದರೆ, ಈ ತಾಯಂದಿರ ಮತ ಪಡೆದು ಗೆಲ್ಲುವ ತುಳುನಾಡಿನ ಜನಪ್ರತಿನಿಧಿಗಳು ಕೂಡಾ ಈ ವಿಷಯದಲ್ಲಿ ಮಾತಾಡಲು ಹೆದರುತ್ತಿದ್ದಾರೆ. ಕೇವಲ ಮಾತುಗಳ ಮಟ್ಟಕ್ಕಷ್ಟೇ ಸೀಮಿತವಾಗಿರುವ 'ನ್ಯಾಯ' ಎಂಬ ಪದ, ಈ ಮಹಿಳೆಯರ ಜೀವನದಲ್ಲಿ ಇನ್ನೂ ಬೆಳಕಾಗಿಲ್ಲ. ಇದೀಗ ಹೋರಾಟಗಾರರು ಹೇಳುತ್ತಿರುವ ಮಾತು ಒಂದೇ. "ನಮ್ಮ ತಾಯಂದಿರ ಅಕ್ಷಯಪಾತ್ರೆ ಸೂಪು ಮರೆಯಬಾರದು."

ಅವರ ಶ್ರಮಕ್ಕೆ ಸಿಗಬೇಕಾದ ಗೌರವ, ಅವರಿಗೆ ನೀಡಬೇಕಾದ ಹಕ್ಕು ಮಣ್ಣುಮುಚ್ಚಿಕೊಳ್ಳಬಾರದು.

ಮಂಗಳೂರು ಮತ್ತು ತುಳುನಾಡಿನ ಜನತೆಗೆ ಈ ಕ್ಷಣದಲ್ಲಿ ಮಹತ್ತರ ಜವಾಬ್ದಾರಿ ಇದೆ. ಈ ಮಹಿಳೆಯರು ತಮ್ಮ ಕುಟುಂಬದ ಬದುಕಿಗಾಗಿ ಹೋರಾಡುತ್ತಿದ್ದರೆ, ಅವರ ನ್ಯಾಯಕ್ಕಾಗಿ ನಿಲ್ಲುವುದು ನಮ್ಮ ಸಮಾಜದ ನೀತಿ. ನ್ಯಾಯ ಸಿಗದಾಗ, ಮೌನವು ಸಹ ಅಡ್ಡಪಾಲಾಗುತ್ತದೆ.

**ಸಂಪಾದಕ**

## ಮಾನವೀಯತೆ ಮೆರೆದ ಬಸ್ ಚಾಲಕ ರಾಣಿ ಅಬ್ಬಕ್ಕ ಖಾಸಗಿ ಬಸ್ ನೌಕರರ ಸಂಘದ ಅಭಿನಂದನೆ

**ಮಂಗಳೂರು:** ಬಸ್ಸಿನ ಫ್ರಂಟ್ ಕ್ಯಾಮೆರಾದಲ್ಲಿ ದಾಖಲಾಗಿದ್ದ ಮಾನವೀಯ ಘಟನೆಯಲ್ಲಿ, ಬಸ್ ಚಾಲಕರೊಬ್ಬರು ತಾಯಿಯೊಬ್ಬರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಿದ ಸೇವೆಯು ಸಮಾಜಕ್ಕೆ ಸ್ಫೂರ್ತಿದಾಯಕವಾಗಿದೆ , ಮಾನವೀಯತೆ ಮೆರೆದ ಬಸ್ ಚಾಲಕನಿಗೆ ರಾಣಿ ಅಬ್ಬಕ್ಕ ಖಾಸಗಿ ಬಸ್ ನೌಕರರ ಸಂಘ ಅಭಿನಂದಿಸಿದೆ.



ಈ ಘಟನೆ ಖಾಸಗಿ ಬಸ್ ನೌಕರರು ಕೇವಲ ಸಾರಿಗೆ ಕೆಲಸ ಮಾಡುವವರು ಅಲ್ಲ, ಸಂಕಷ್ಟದಲ್ಲಿ ಜೀವ ಉಳಿಸುವ ಜವಾಬ್ದಾರಿಯುತ ಮಾನವರೂ ಆಗಿದ್ದಾರೆ ಎಂಬುದನ್ನು ಮರುಸಾಬೀತುಪಡಿಸಿದೆ.

ಇಂತಹ ಸೇವಾಭಾವ ಹೊಂದಿರುವ ಎಲ್ಲ ಸದಸ್ಯರಿಗೆ ಅಭಿನಂದನೆಗಳು. ಮಾನವೀಯತೆ ಮತ್ತು ಕರ್ತವ್ಯಬೋಧನೆ ಇವೇ ನಮ್ಮ ನೌಕರರ ನಿಜವಾದ ಶಕ್ತಿ ಎಂದು ರಾಣಿ ಅಬ್ಬಕ್ಕ ಖಾಸಗಿ ಬಸ್ ನೌಕರರ ಸಂಘದ ಅಧ್ಯಕ್ಷ ಉಸ್ಮಾನ್ ಅಲ್ತಾಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೋಟೆಕಾರು ಪ.ಪಂ ಸಾಮಾನ್ಯ ಸಭೆಯಲ್ಲಿ ಕುಂಪಲ–ಮಡ್ಯಾರ್ ಸಂಪರ್ಕದ ಚರ್ಚೆ

# ಉಳ್ಳಾಲವಾಣಿ ಅಭಿಯಾನಕ್ಕೆ ಮೊದಲ ಸ್ಪಂಧನೆ



ಫಲಶ್ರುತಿ

**ಕೋಟೆಕಾರು:** ಕೋಟೆಕಾರು ಪ.ಪಂ ಸಾಮಾನ್ಯ ಸಭೆಯಲ್ಲಿ ಕುಂಪಲ –ಮಡ್ಯಾರು ಸಂಪರ್ಕ ರಸ್ತೆ ನಡೆಸುವ ಕುರಿತು ವಿಷಯ ಪ್ರಸ್ತಾಪವಾಗಿದ್ದು, ಶೀಘ್ರವೇ ಖಾಸಗಿ ಜಾಗದವರು ಹಾಗೂ ಸೋಮೇಶ್ವರ ಪುರಸಭೆಯ ಅಧಿಕಾರಿಗಳು, ಜನಪ್ರತಿನಿಧಿಗಳಲ್ಲಿ ಚರ್ಚೆ ನಡೆಸಿ ತೀರ್ಮಾನಕ್ಕೆ ಬರುವುದಾಗಿ ಕೋಟೆಕಾರು ಪ.ಪಂ ಅಧ್ಯಕ್ಷೆ ದಿವ್ಯಾ ಸತೀಶ್ ಶೆಟ್ಟಿ ಹೇಳಿದ್ದಾರೆ.

ಉಳ್ಳಾಲವಾಣಿ ಪತ್ರಿಕೆಯಲ್ಲಿ ಕುಂಪಲ–ಮಡ್ಯಾರು ಎರಡು ಗ್ರಾಮಗಳ ಸಂಪರ್ಕ ರಸ್ತೆ ಕಲ್ಪಿಸುವ ಸಲುವಾಗಿ ವರದಿಯನ್ನು ಪ್ರಕಟಿಸಲಾಗಿತ್ತು. ಈ ವರದಿ ಆಧರಿಸಿ ಕೌನ್ಸಿಲರ್ ಹರೀಶ್ ರಾವ್ ಮಡ್ಯಾರ್ ಎರಡು ಗ್ರಾಮಗಳ ಸಂಪರ್ಕವಾದಲ್ಲಿ ಅಭಿವೃದ್ಧಿ ಬಹಳಷ್ಟು ಸಾಧ್ಯ. ಇದರಿಂದ ಕಿರಿದಾದ ರಸ್ತೆಯನ್ನು ಹೊಂದಿರುವ ಕುಂಪಲದ ಜನತೆಗೆ ಬಹಳಷ್ಟು ತೆ–ಊಂದರೆಯಾಗುತಿತ್ತು. ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಪಂಚಾಯತ್ ಮುತುವರ್ಜಿ ವಹಿಸಬೇಕಿದೆ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷೆ ದಿವ್ಯಾ ಶೆಟ್ಟಿ, ಈಗಾಗಲೇ ಈ ಕುರಿತು ಸ್ಥಳೀಯರೊಂದಿಗೆ ಮಾತುಕತೆಯನ್ನು ನಡೆಸುತ್ತಿದ್ದೇವೆ. ಕುಂಪಲ ಭಾಗದ ಮುಖಂಡರು ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ತುರ್ತಾಗಿ ರಸ್ತೆ ನಡೆಸುವ ತೀರ್ಮಾನ ಕೈಗೊಂಡು ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದುಕೊಳ್ಳಲು ಸಭೆ ನಡೆಸುವಂತೆ ಸೂಚಿಸಿದ್ದಾರೆ. ಅದರಂತೆ ಅತಿ ಶೀಘ್ರದಲ್ಲಿ ಸಭೆ ನಡೆಸಿ ತೀರ್ಮಾನಕ್ಕೆ ಬರುವುದಾಗಿಯೂ, ಸೋಮೇಶ್ವರ ಪುರಸಭೆಯನ್ನು ವಿಶ್ವಾಸಕ್ಕೆ ಪಡೆದು–ಕೊಂಡು ಎರಡು ಗ್ರಾಮಗಳನ್ನು ಸಂಪರ್ಕ ಕಲ್ಪಿಸುವ ಕಾರ್ಯ–ಕ್ಕೆ ಕೈಹಾಕುತ್ತೇವೆ ಅನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ಕೌನ್ಸಿಲರ್ ಅಹ್ಮದ್ ಅಜ್ಜಿನಡ್ಕ ಅವರು, ಬನತ್ತಡಿ ಜಾಗದಲ್ಲಿ ತ್ಯಾಜ್ಯ ನಿರ್ವಹಣೆ ಘಟಕ ನಿರ್ಮಾಣಕ್ಕೆ ಮೀಸಲಿಡುವುದು ಬೇಡ. ಈ ಜಾಗದ ಸಮೀಪ ಹಲವು ಮನೆಗಳಿವೆ.ಇವರಿಗೆ ಘಟಕ ನಿರ್ಮಾಣವಾದರೆ ತೊಂದ–ರೆ ಆಗುತ್ತಿದೆ.ಈ ಜಾಗವನ್ನು ದಫನ ಭೂಮಿಗೆ ಮೀಸಲಿಡಿ ಎಂದಾಗ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಿತು. ತ್ಯಾಜ್ಯ ನಿರ್ವಹಣೆಗೆ ಈ ಜಾಗ ಮೀಸಲಿಡುವುದಕ್ಕೆ ಸಭೆಯಲ್ಲಿ ವ್ಯಕ್ತವಾದ ಆಕ್ಷೇಪಕ್ಕೆ ಸದಸ್ಯರು ಸಹಮತ ಸೂಚಿಸಿದರು. ಬನತಡಿ ಎಫ್ ಎಸ್ ಟಿ ಪಿ ನಿರ್ಮಿಸಲು ಗುರುತಿಸಿದ ಜಾಗದಲ್ಲಿ ಘಟಕ ನಿರ್ಮಾಣಕ್ಕೆ ಸ್ಥಳೀಯ ಸದಸ್ಯರ ವಿರೋಧ ಇದೆ. ಬೇರೆ ಕಡೆ ಕಡೆ ಮಾಡುವುದಕ್ಕೆ ಉಳಿದ ಸದಸ್ಯರ ವಿರೋಧ ಇದೆ. ಆದರಿಂದ ಕೋಟೆಕಾರು ಗ್ರಾಮದ ಹೊರಗಡೆ ಘಟಕ ನಿರ್ಮಾಣಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ತಹಶೀಲ್ದಾರ್ ಗೆ ಮನವಿ ಮಾಡಲಾಗುವುದು ಎಂದು ಅಧ್ಯಕ್ಷ ದಿವ್ಯ ಸತೀಶ್ ಹೇಳಿದರು. ಬೀರಿ ಆರೋಗ್ಯ ಕೇಂದ್ರ ಬಳಿ ಇರುವ ವಿದ್ಯುತ್ ಸಂಪರ್ಕ ಇಲ್ಲದ ಮನೆಗೆ ವಿದ್ಯುತ್ ಸಂಪರ್ಕ ಯಾಕೆ ಮಾಡುವುದಿಲ್ಲ ಎಂದು ಸುಜಿತ್ ಮಾಡೂರು ಮೆಸ್ಕಾಂ ಜೆಇ ಮಾರಪ್ಪರನ್ನು ಪ್ರಶ್ನಿಸಿದರು. ಈ ವಿಚಾರದಲ್ಲಿ ವ್ಯಾಪಕ ಚರ್ಚೆ ಸಭೆಯಲ್ಲಿ ನಡೆಯಿತು. ಪಶು ಸಂಗೋಪನಾ ಇಲಾಖೆ ಯ ರಚನಾ ಮಾತನಾಡಿ , ನಾಯಿಗಳ ಕಾಟ ತಡೆಯಲು ಸಂತಾನ ಹರಣಾ ಚಿಕಿತ್ಸೆ ನೀಡಲಾಗುತ್ತದೆ. ಒಂದೊಂದು ನಾಯಿಗೆ ಚಿಕಿತ್ಸೆ ನೀಡಲಾಗುವುದಿಲ್ಲ.ಸಾಕು ನಾಯಿ ತಂದುಕೊಟ್ಟಲ್ಲಿ ಸಂತಾನ ಹರಣ ಚಿಕಿತ್ಸೆ ನೀಡಲಾಗುವುದು ಎಂದರು. ಶಿಶು ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಶಂಕರಿ ಅವರು,ಕೋಟೆಕಾರ್ , ಸೋಮೇಶ್ವರ, ಕಿನ್ಯ, ತಲಪಾಡಿ ಗ್ರಾಮ ಪೈಕಿ ಆರಂಭ ಹಂತದಲ್ಲಿ ಪಟ್ನಾ ತಲಪಾಡಿ ಬಳಿ ಒಂದು ಅಂಗನವಾಡಿಯಲ್ಲಿ ಎಲ್ ಕೆಜಿ ಯುಕೆ ಜಿ ಶುಕ್ರವಾರ ಆರಂಭಿಸಲಾಗಿದೆ. ಮುಂದಿನ ಹಂತದಲ್ಲಿ ಉಳಿದ ಅಂಗನವಾಡಿಗಳಲ್ಲಿ ಹಂತ ಹಂತವಾಗಿ ಆರಂಭ ಗೊಳ್ಳಲಿದೆ ಎಂದು ಹೇಳಿದರು. ಅಂಗನವಾಡಿ ತಾಲೂಕು ವ್ಯಾಪ್ತಿಯ ಎಲ್ಲಾ ಕಡೆ ಶೀಘ್ರ ಆರಂಭಿಸಬೇಕು. ಇದರಿಂದ ಬಹಳಷ್ಟು ವಿದ್ಯಾರ್ಥಿಗಳಿಗೆ ಅನುಕೂಲ ಆಗುತ್ತದೆ ಎಂದು ಸದಸ್ಯರು ಸಭೆಯಲ್ಲಿ ಆಗ್ರಹಿಸಿದರು. ಪ್ರತಿ ವಾರ್ಡ್ ಗೆ 20 ದಾರಿ ದೀಪ ನೀಡಬೇಕು. ಅಗತ್ಯ ಸ್ಥಳಗಳಲ್ಲಿ ದಾರಿದೀಪ ಬೇಕು ಎಂದು ಸದಸ್ಯ ಸುಜಿತ್ ಮಾಡೂರು ಹೇಳಿದರು. ದಾರಿದೀಪ ದ ಟೆಂಡರ್ ಸನ್ ಲೈಟ್ ಅವರಿಗೆ ನೀಡುವುದು ಬೇಡ. ಬೇರೊಬ್ಬರಿಗೆ ನೀಡಿ.ಒಬ್ಬರೇ ನಿರ್ವಹಣೆ ಮಾಡಲಿ ಎಂದು ಸದಸ್ಯ ಧೀರಜ್ ಹೇಳಿದರು. ಕೋಟೆಕಾರ್ ಪಟ್ಟಣ ಪಂಚಾಯತ್ ವ್ಯಾಪ್ತಿಯ ಪನೀರ್ ಕಾನ್ವೆಂಟ್ ಬಳಿ ಇರುವ ಸರಕಾರಿ ಸ್ಥಳದಲ್ಲಿ ಅಮೃತ್ 2.0 ಬಹು ಗ್ರಾಮ ಕುಡಿಯುವ ನೀರು ಯೋಜನೆ 10 ಲಕ್ಷ ಲೀ.ಸಾಮರ್ಥ್ಯ ದ ಓವರ್ ಹೆಡ್ ಟ್ಯಾಂಕ್ ನಿರ್ಮಿಸುವ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಮಾಡೋಣ. ಮೊದಲಿಗೆ ಪೈಪ್ ಲೈನ್ ಕಾಮಗಾರಿ ಪೂರ್ಣ ಆಗಲಿ ಎಂದು ಅಧ್ಯಕ್ಷರು ತಿಳಿಸಿದರು. ಟ್ಯಾಂಕ್ ನಿರ್ಮಾಣ ಬಳಿಕ ನಿರ್ವಹಣೆ ಮಾಡುವವರು ಯಾರು ಎಂಬ ಬಗ್ಗೆ ತೀರ್ಮಾನ ಆಗಬೇಕು. ನನ್ನ ವಾರ್ಡ್ ನ ತುರ್ತು ಕಾಮಗಾರಿ ಗೆ ಯಾಕೆ ಹಣ ನೀಡಿಲ್ಲ ಎಂದು ಪ್ರಶ್ನಿಸಿದ ಎಸ್ ಡಿಪಿಐ ಸದಸ್ಯೆ ಸಲೀಮಾ ಬಿ ಹಸೀನ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ತುರ್ತು

ಕಾಮಗಾರಿಗೆ ಸ್ಥಾಯಿ ಸಮಿತಿ ಸದಸ್ಯರ ಸಭೆಯಲ್ಲಿ ಅನುದಾನ ನೀಡಿದೆ. ಮುಖ್ಯಾಧಿಕಾರಿ ಮಾಲಿನಿ, ಉಪಾಧ್ಯಕ್ಷ ಪ್ರವೀಣ್ ಸ್ಥಾಯಿ ಸಮಿತಿ ಅಧ್ಯಕ್ಷ ಉದಯ ಕುಮಾರ್ ಉಪಸ್ಥಿತರಿದ್ದರು.

# ಜಿಲ್ಲಾಡಳಿತದಿಂದ ಎನ್ಐಟಿಕೆಗೆ ತಾಂತ್ರಿಕ ತನಿಖೆ ಹಸ್ತಾಂತರ

↗1ನೇ ಪುಟದಿಂದ ಹಿಂಭಾಗದ 70 ಅಡಿ ಗುಡ್ಡವನ್ನು ಗ್ರಾಮ ಪಂಚಾಯತಿ ಅನುಮೋದನೆಯಡಿ ಕೆಲವು ಖಾಸಗಿ ವ್ಯಕ್ತಿಗಳು ಹಾಗೂ ಇಂಜಿನಿಯರ್‌ಗಳು ಜೆ.ಸಿ.ಬಿ. ಯಂತ್ರದಿಂದ ಅವೈಜ್ಞಾನಿಕವಾಗಿ ಅಗೆದಿದ್ದರು. ಗುಡ್ಡದ ತಳದಲ್ಲಿ ಅಡ್ಡಗಟ್ಟು ನಿರ್ಮಿಸದೇ ಇದ್ದದ್ದು ಮತ್ತು ಮಳೆಯ ನೀರು ನುಗ್ಗಿ ಮಣ್ಣು ಒಡಿದು ಕುಸಿತಕ್ಕೆ ಕಾರಣವಾಯಿತು. ಈ ಕಾಮಗಾರಿಗೆ ಗ್ರಾಮ ಪಂಚಾಯತಿ, ತಹಶೀಲ್ದಾರ್ ಕಚೇರಿ ಮತ್ತು ಕಂದಾಯ ಇಲಾಖೆಯ ಅನುಮತಿ ಪಡೆಯಲಾಗಿತ್ತು ಎಂಬ ದಾಖಲೆಗಳಿವೆ.

**ಸುಳ್ಳು ವರದಿ ಆರೋಪ ಜಿಲ್ಲಾ ಪಂಚಾಯತ್ ಅಧಿಕಾರಿ ವಿರುದ್ಧ ಆಕ್ರೋಶ:**

ದ.ಕ. ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಾಹಣಾ ಇಂಜಿನಿಯರ್ ಅವರು ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ತಪ್ಪು ಮಾಹಿತಿ ನೀಡಿ, ನಿಜವಾದ ತಪ್ಪಿತಸ್ಥರನ್ನು ಕಾಪಾಡುವ ಪ್ರಯತ್ನ ಮಾಡಿದ್ದಾರೆ ಎಂದು ದೂರಿದ್ದಾರೆ.

ಘಟನೆಯ ಗಾಂಭೀರ್ಯ ಮತ್ತು ಆಡಳಿತದ ವರದಿಗಳಲ್ಲಿನ ವೈಷಮ್ಯಗಳನ್ನು ಗಮನಿಸಿದ ರಾಜ್ಯ ಮಾನವ ಹಕ್ಕುಗಳ ಆಯೋಗವು ಜಿಲ್ಲಾಡಳಿತದಿಂದ ಸಂಪೂರ್ಣ ಸ್ಪಷ್ಟೀಕರಣ ಮತ್ತು ವರದಿ ಕೋರಿ ನೋಟಿಸ್ ಜಾರಿಗೊಳಿಸಿದೆ. ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯ ಹಾಸಿಗೆಯಲ್ಲಿರುವ ಅಶ್ವಿನಿ ಮತ್ತು ಕುಟುಂಬದವರು ಒತ್ತಿ ಹೇಳುವುದು ಒಂದೇ. ಪೈಸೆ ಎಲ್ಲ ಮುಖ್ಯವಲ್ಲ. ನಮ್ಮ ಮಕ್ಕಳನ್ನು, ಅತ್ತೆಯನ್ನು ಕಸಿದುಕೊಂಡವರು ಯಾರು? ನಿರ್ಲಕ್ಷ್ಯ ಮಾಡಿದ ಅಧಿಕಾರಿಗಳು,



ಅನುಮತಿ ಕೊಟ್ಟವರು, ಅವೈಜ್ಞಾನಿಕವಾಗಿ ಗುಡ್ಡ ಕತ್ತರಿಸಿದವರು ಇವರೆಲ್ಲರ ವಿರುದ್ಧ ಕಾನೂನು ಕ್ರಮ ಆಗಬೇಕು. ಇನ್ನೊಂದು ಕುಟುಂಬ ಇಂತಹ ದುರಂತ ಅನುಭವಿಸಬಾರದು.

NITK ಸಿವಿಲ್ ಇಂಜಿನಿಯರಿಂಗ್ ಮತ್ತು ಜಿಯಾಲಜಿಕಲ್ ತಜ್ಞರ ತಂಡವು ಶೀಘ್ರದಲ್ಲೇ ಸ್ಥಳ ಪರಿಶೀಲನೆ ನಡೆಸಿ, ಗುಡ್ಡ ಕುಸಿತಕ್ಕೆ ನಿಖರ ಕಾರಣ, ತಾಂತ್ರಿಕ ತಪ್ಪುಗಳು, ಕಾಮಗಾರಿಯ ವೈಜ್ಞಾನಿಕತೆ ಎಲ್ಲವನ್ನೂ ಪರಿಶೀಲಿಸಿ ವರದಿ ಸಲ್ಲಿಸಲಿದೆ. ಈ ವರದಿ ಆಧಾರದಲ್ಲಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಇತರೆ ಕಾರಣದಾತರ ವಿರುದ್ಧ ಕ್ರಮ ಕೈಗೊಳ್ಳಲಾಗುವ ನಿರೀಕ್ಷೆಯಿದೆ. ಮಂಜನಾಡಿ ದುರಂತ ಕೇವಲ ಒಂದು ಕುಟುಂಬದ ಕಣ್ಣೀರಲ್ಲ, ಆಡಳಿತದ ನಿರ್ಲಕ್ಷ್ಯ ಮತ್ತು ಅವೈಜ್ಞಾನಿಕ ಅಭಿವೃದ್ಧಿಯ ದುಷ್ಪರಿಣಾಮದ ಕಹಿ ಸತ್ಯ. NITK ವರದಿ ಸತ್ಯವನ್ನು ಹೊರತರಲಿ ಅನ್ನುವ ನಿರೀಕ್ಷೆಯಲ್ಲಿ ಕುಟುಂಬಿಕರಿದ್ದಾರೆ.

# ದೋಣಿಯಲ್ಲಿ ಸಂಚರಿಸಿದ ಜಿಲ್ಲಾಧಿಕಾರಿ

↗1ನೇ ಪುಟದಿಂದ ಹಿಂದೆ ಈ ಸಂಕ ಕುಸಿದು ಬಿದ್ದಿತ್ತು. ಈ ಪ್ರದೇಶದಲ್ಲಿ ಸುಮಾರು 300ಕ್ಕೂ ಅಧಿಕ ಕುಟುಂಬಗಳು ವಾಸಿಸುತ್ತಿದ್ದು, ಕಾಲುಸಂಕದ ಮೂಲಕ ನದಿಬದಿಯಲ್ಲಿ ಸಮನಾಂತರವಾಗಿ ನಡೆದು ನಗರ ಸಂಪರ್ಕಿಸಲು ಹತ್ತಿರವಾಗಿತ್ತು. ಕಾಲುಸಂಕ ಕುಸಿದುಬಿದ್ದು, ಸ್ಥಳೀಯರಿಗೆ ದೈನಂದಿನ ಓಡಾಟಕ್ಕೆ ತೊಂದರೆಯಾಗಿ–ತ್ತು. ಈ ಸಂಕವನ್ನು ದುರಸ್ತಿಪಡಿಸಲು ಸ್ಥಳೀಯರು ಬೇಡಿಕೆ ಇಟ್ಟಿದ್ದರು. ಆ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಎಚ್.ವಿ.ದರ್ಶನ್ ಮಹಾನಗರಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ರೊಂದಿಗೆ ದೋಣಿಯಲ್ಲೇ ಕಾಲುಸಂಕ ಇದ್ದ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು.

# ಕೆಂಪುಕಲ್ಲು ದರ ಮತ್ತಷ್ಟು ಇಳಿಕೆ

↗1ನೇ ಪುಟದಿಂದ ಅಂದರೆ 5,28,000 ಕೆಂಪುಕಲ್ಲು ಬ್ಲಾಕ್ ಗಳನ್ನು ತೆಗೆದುಕೊಳ್ಳಲು ಸರ್ಕಾರ ಅನುಮತಿ ನೀಡುತ್ತದೆ. ಈ ಮಿತಿಯ ನಿಯಂತ್ರಣದಿಂದ ಗಣಿಗಾರಿ–ಕೆಯ ಅತಿಯಾದ ಶೋಷಣೆಗೆ ಅಡ್ಡಿ ಬಿದ್ದು, ಪಾಯ ಮಾಲಕರಿಗೆ ಯೋಜಿತ ಉತ್ಪಾದನೆ ನಡೆಸುವ ಅಗತ್ಯ ಇದೆ. ಈಗಿರುವ 55 ಪರವಾನಿಗೆಗಳ ಜೊತೆ–ಗೆ ಬಾಕಿ ಇರುವ 29 ಪಾಯಗಳಿಗೆ ಸಹ ಅನುಮತಿ ದೊರೆತರೆ, ಪೂ–ರೈಕೆ ಪ್ರಮಾಣ ಹೆಚ್ಚಾಗಿ ಸಾಗಾಟದ ದರವೂ ಕಡಿಮೆಯಾಗಲಿದ್ದು, ಇದರ ಪರಿಣಾಮವಾಗಿ ಕೆಂಪುಕಲ್ಲಿನ ದರ ಇನ್ನಷ್ಟು ಇಳಿಕೆಯಾಗುವ ಸಾಧ್ಯತೆ ಇದೆ.

ರಾಜಧನ ಕಡಿತ, ಉತ್ಪಾದನಾ ವೆಚ್ಚದ ನಿಯಂತ್ರಣ ಮತ್ತು ಹೊಸ ಪರವಾನಿಗೆಗಳ ಲಭ್ಯತೆ. ಈ ಮೂರು ಅಂಶಗಳ ಸಮನ್ವಯವೇ ಇಂದಿನ ಮಾರುಕಟ್ಟೆ ಪರಿಸ್ಥಿತಿಯನ್ನು ದರ ಇಳಿಕೆಯತ್ತ ಮುನ್ನಡೆಸುತ್ತಿದೆ. ಸರ್ಕಾರದ ನಿಯಮಾವಳಿ ಕಠಿಣಗೊಂಡಿರುವುದರಿಂದ ಪಾಯ ಮಾಲಕರಿಗೆ ನಿರ್ವಹಣಾ ಹೊರೆ ಸ್ವಲ್ಪ ಹೆಚ್ಚಾದರೂ, ದೀರ್ಘಾವಧಿಯಲ್ಲಿ ಗಣಿಗಾರಿಕೆಯ ಉತ್ತರದಾಯಕತೆ ಮತ್ತು ಪರಿಸರ ಸಮತೋಲನ ಕಾಪಾಡಲು ಇದು ಅಗತ್ಯವಾದ ಕ್ರಮವೆಂದು ಒಕ್ಕೂಟದ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

### ಕೆಂಪು ಕಲ್ಲು ಪಾಯಗಳ ಮಾಲಕರ ಒಕ್ಕೂಟ

↗1ನೇ ಪುಟದಿಂದ ಸಮೀಕ್ಷೆ ನಡೆದು ಬಳಿಕ ಅನುಮತಿ ನೀಡಲಾಗುತ್ತದೆ. ನಿಗದಿಪಡಿಸಿದ ಸ್ಥಳದಲ್ಲಿ ಕಲ್ಲು ದೊರೆಯದಿದ್ದರೆ ಇನ್ನೊಂದು ಜಾಗದಲ್ಲಿ ಅವಕಾಶ ಕೋರಲು ಮತ್ತೆ ಮರು ಅರ್ಜಿ ಸಲ್ಲಿಸಬೇಕಾಗುತ್ತದೆ. ಬಳಿಕ ಕಲ್ಲು ತೆಗೆದ ಜಾಗದಲ್ಲಿ ಮಣ್ಣು ತುಂಬಿಸುವ ಕಾರ್ಯ ನಡೆಯಬೇಕು. ಕೃಷಿಗೆ ಅಗತ್ಯವಾದ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕು. ಈ ರೀತಿಯಾಗಿ ನಿಯಮಗಳು ಕಠಿಣಗೊಂಡಿರುವುದರಿಂದ ಪರವಾನಿಗೆ ಸಂಖ್ಯೆಯೂ ಕಡಿಮೆಯಾಗಿದೆ. 256 ರೂ.ಗಳಿಗೆ ಏರಿಕೆ–ಯಾಗಿದ್ದ ರಾಜಧನ ಇದೀಗ ಹಿಂದಿನಂತೆ 97 ರೂ.ಗಳಿಗೆ ಇಳಿಕೆಯಾಗಿದೆ. ಒಂದು ಎಕರೆ ಭೂಮಿಯಲ್ಲಿ 16,000 ಟನ್ ಮುರಕಲ್ಲು (5,28000 ಕೆಂಪುಕಲ್ಲು) ತೆಗೆಯಲು ಅವಕಾಶವಿದೆ. ಕಲ್ಲೊಂದರ ಉತ್ಪಾದನೆಗೆ ಎಲ್ಲಾ ಖರ್ಚು ವೆಚ್ಚಗಳನ್ನು ಲೆಕ್ಕ ಹಾಕಿದಾಗ 28 ರೂ. ಗಳಾಗುತ್ತದೆ. ಸದ್ಯ ಕಲ್ಲು ಕೋರೆಗಳಲ್ಲಿ 32 ರೂ.ನಿಂದ 35 ರೂ. ದರದಲ್ಲಿ ಕಲ್ಲು ಪೂರೈಸಲಾಗುತ್ತಿದೆ ಎಂದು ಉಪಾಧ್ಯಕ್ಷ ರವಿಶಂಕರ್ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕೋಶಾಧಿಕಾರಿ ರಾಮ ಮುಗುರೋಡಿ, ಬಂಟ್ವಾಳ ವಲಯದ ಅಧಯಕ್ಷ ಮೋಹನ್ ಶೆಟ್ಟಿ, ರವಿ ರೈ ಪಜೀರು ಉಪಸ್ಥಿತರಿದ್ದರು.

# ಯು.ಟಿ. ಖಾದರ್‌ಗೆ ಸಚಿವ ಸ್ಥಾನ?

- ಖಾದರ್ ಅಲ್ಪಸಂಖ್ಯಾತ ಸಮುದಾಯದವರು ಎಂಬ ಅಂಶ ಈ ಹುದ್ದೆಗೆ ಮುಖ್ಯ ರಾಜಕೀಯ ಅಡ್ಡಿಯಾಗುತ್ತದೆ.
- ಕೇಂದ್ರ ನಾಯಕತ್ವವೂ ಈ ದಿಸೆಯಲ್ಲಿ ದೊಡ್ಡ ಸನ್ನದ್ಧತೆ ತೋರಿಸದೇ ಇರುವ ಸಾಧ್ಯತೆ ಇದೆ.

↗1ನೇ ಪುಟದಿಂದ ಪರಿಗಣಿಸುವ ಸಾಧ–್ಯತೆ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಬಹಳ ಕಡಿಮೆ. ಕರ್ನಾಟಕದಲ್ಲಿ ಉಪಮುಖ್ಯಮಂತ್ರಿಯ ಹುದ್ದೆ ಸಾಮಾನ್ಯವಾಗಿ ಜಾತಿ ಸಮೀಕರಣ ಮತ್ತು ದೊಡ್ಡ ಪ್ರಾದೇಶಿಕ ಸಮತೋಲನಗಳ ಮೇಲೆ ನಿರ್ಧರಿಸಲಾಗುತ್ತದೆ. ಖಾದರ್ ಅಲ್ಪಸಂಖ್ಯಾತ ಸಮುದಾಯದವರು ಎಂಬ ಅಂಶ ಈ ಹುದ್ದೆಗೆ ಮುಖ್ಯ ರಾಜಕೀಯ ಅಡ್ಡಿಯಾಗುತ್ತದೆ. ಕೇಂದ್ರ ನಾಯಕತ್ವವೂ ಈ ದಿಸೆಯಲ್ಲಿ ದೊಡ್ಡ ಸನ್ನದ್ಧತೆ ತೋರಿಸದೇ ಇರುವ ಸಾಧ್ಯತೆ ಇದೆ.

ಒಟ್ಟಾಗಿ ನೋಡಿದರೆ, ಖಾದರ್ ಅವರನ್ನು ಕೈಗಾರಿಕಾ ಅಥವಾ ಲೋಕೋಪಯೋಗಿ ಸಚಿವರನ್ನಾಗಿಸುವ ಸಾಧ್ಯತೆ ರಾಜಕೀಯವಾಗಿ ಹೆಚ್ಚು. ಅವರ ಸ್ವಭಾವ, ಅನುಭವ ಮತ್ತು ಪಕ್ಷದ ಚಿತ್ರಕ್ಕೆ ಅವರು ನೀಡಿದ ಕೊಡುಗೆ. ಆದ–ರೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ಅವಶ್ಯಕವಾದ ರಾಜಕೀಯ ಗಣಿತ ಮತ್ತು ಮತದಾರ ಸಮೀಕರಣಗಳು ಅವರ ಪರವಾಗಿಲ್ಲ. ಅಂತಿಮ ನಿರ್ಧಾರ ಪಕ್ಷದ ಒಳಗಿನ ಶಕ್ತಿ ಸಮೀಕರಣಗಳ ಮೇಲೆ ಅವಲಂಬಿತವಾಗಿದ್ದರೂ, ಖಾದರ್ ಅವರ ಮೌಲ್ಯ, ಗೌರವ ಮತ್ತು ಜನಪ್ರಿಯತೆ ಅವರಿಗೆ ಮತ್ತೆ ಸಚಿವ ಸ್ಥಾನಕ್ಕೆ ಹಾದಿ ತೆರೆದುಕೊಡಬಹುದಾದ ಸೂಚನೆಗಳನ್ನು ಈಗಲೇ ನೀಡುತ್ತಿದೆ.

# ವಿಶ್ವದ ಮಹಾನ್ ಸಾಧಕ ನಾರಾಯಣ ಗುರುಗಳ ಕಾರ್ಯಕ್ರಮ ಯಶಸ್ವಿಗೊಳಿಸೋಣ: ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ



**ಉಳ್ಳಾಲ:** ನ–28 ಕುದ್ಮುಲ್ ರಂಗರಾವ್ ಅವರು ಸಾರಸ್ವತ ಬ್ರಾಹ್ಮಣರಾದರೂ ಸಹ ಪರಿಶಿಷ್ಟ ಜಾತಿಯವರ ಏಳಿಗೆಗಾಗಿ ದುಡಿದಿದ್ದರು. ಅದೇ ರೀತಿ ನಾರಾಯಣ ಗುರುಗಳು ಸಹ ಶೋಷಿತ ವರ್ಗದ ಪರವಾಗಿ ನಿಂತು,ಅಸ್ಪೃಶ್ಯತೆಯನ್ನ ದೂರ ಮಾಡಿ ಮನುಕುಲಕ್ಕೆ ಉತ್ತಮ ಸಂದೇಶ ನೀಡಿ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದರು.ವಿಶ್ವಕ್ಕೆ ಮಹತ್ತರ ಕೊಡುಗೆ ನೀಡಿದ ಮಹಾನ್ ಸಾಧಕರಲ್ಲಿ ಅವರೂ ಒಬ್ಬರಾಗಿದ್ದಾರೆ. ಡಿ.3 ರಂದು ಕೊಣಾಜೆಯಲ್ಲಿ ನಡೆಯಲಿರುವ ಗುರುಗಳ ಕಾರ್ಯಕ್ರಮದಲ್ಲಿ ಯಾವುದೇ ಚ್ಯುತಿ ಬಾರದಂತೆ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ ಕರೆ ನೀಡಿದರು. ಶಿವಗಿರಿ ಮಠ –ವರ್ಕಲ,ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ನಾರಾಯಣ ಗುರು ಅಧ್ಯಯನಪೀಠ ಆಶ್ರಯದಲ್ಲಿ ಇದೇ ಡಿ.3 ರಂದು ಕೊಣಾಜೆ–ಯ ಮಂಗಳೂರು ವಿವಿ ಮೈದಾನದಲ್ಲಿ ನಡೆಯಲಿರುವ ಶತಮಾನದ ಮಹಾಪ್ರಸ್ಥಾನ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಮತ್ತು ಮಹಾತ್ಮಾಗಾಂಧಿ ಐತಿಹಾಸಿಕ ಗುರು–ಗಾಂಧಿ ಸಂವಾದ ಶತಮಾನೋತ್ಸವದ ಪ್ರಯುಕ್ತ ಉಳ್ಳಾಲ ವಲಯ ಬಿಲ್ಲವರ ಸಂಘಗಳ ಒಕ್ಕೂಟದ ವತಿಯಿಂದ ಕೊಲ್ಯ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಗುರು–ಗಾಂಧಿ ಸಂವಾದ ಶತಮಾನೋತ್ಸವ ಸಮಿತಿಯ ಗೌರವ ಪ್ರಧಾನ ಕಾರ್ಯದರ್ಶಿ ರಕ್ಷಿತ್ ಶಿವರಾಂ ಮಾತನಾಡಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಸೇರಿದಂತೆ ಆರು ಜನ ಮಂತ್ರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಾರಾಯಣ ಗುರುಗಳೇ ಮಾಡುತ್ತಿದ್ದ ಯತಿಪೂಜೆಯನ್ನ ಶಿವಗಿರಿ ಮಠದವರೇ ವೇದಿಕೆಯಲ್ಲಿ ನೆರವೇರಿಸಲಿದ್ದಾರೆ. ಮುಖ್ಯಮಂತ್ರಿಗಳ ಭಾಷಣದ ಬಳಿಕ ಸರ್ವ ಮತ ಸಮ್ಮೇಳನ ಕಾರ್ಯಕ್ರಮ ನಡೆಯಲಿದೆಯೆಂದರು. ಉಳ್ಳಾಲ ವಲಯ ಬಿಲ್ಲವರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಕೆ.ಟಿ ಸುವರ್ಣ ಅಧ್ಯಕ್ಷತೆ ವಹಿಸಿದ್ದರು.ಕೊಲ್ಯ ಶ್ರೀ ನಾಗಬ್ರಹ್ಮ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಭಾಸ್ಕರ ಐತಾಳ್,ಉಳ್ಳಾಲ ವಲಯ ಬಂಟರ ಸಂಘದ ಅಧ್ಯಕ್ಷರಾದ ರವೀಂದ್ರ ರೈ ಕಳ್ಳಿಮಾರ್ ,ತೀಯ ಸಮಾಜದ ಕೇಂದ್ರೀಯ ಸಮಿತಿಯ ಅಧ್ಯಕ್ಷರಾದ ಸದಾಶಿವ ಉಳ್ಳಾಲ್,ಉಳ್ಳಾಲ ಚೀರುಂಭ ಭಗವತೀ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ,ಬಿಜೆಪಿ ಮಂಗಳೂರು ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲ್,ಧಾರ್ಮಿಕ ಮುಖಂಡರಾದ ಚಂದ್ರಶೇಖರ್ ಉಚ್ಚಿಲ್ ,ಕೆ.ಪಿ ಸುರೇಶ್,ಚಂದ್ರಹಾಸ್ ಉಳ್ಳಾಲ್,ಉಳ್ಳಾಲ ಮೊಗವೀರ ಸಂಘದ ಅಧ್ಯಕ್ಷರಾದ ಯಶವಂತ ಅಮೀನ್,ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಗಿರೀಶ್,ಗಾಣಿಗ ಸಮಾಜದ ಹಿರಿಯರಾದ ರಾಮದಾಸ್ ಸೋಮೇಶ್ವರ,ಉಳ್ಳಾಲ ಕುಲಾಲ ಸಮಾಜದ ಅಧ್ಯಕ್ಷರಾದ ಭಾಸ್ಕರ ಕುತ್ತಾರು,ಪದ್ಮಶಾಲಿ ಸಮಾಜದ ಹಿರಿಯರಾದ ಐತಪ್ಪ ಶೆಟ್ಟಿಗಾರ್,ಗಟ್ಟಿ ಸಮಾಜದ ಪ್ರಮುಖರಾದ ಪದ್ಮನಾಭ ಗಟ್ಟಿ ಕೊಣಾಜೆ,ನಾರಾಯಣಗುರು ಅಧ್ಯಯನ ಪೀಠದ ನಿರ್ದೇಶಕರಾದ ಡಾ.ಜಯರಾಜ್ .ಎನ್,ನಾರಾಯಣ ಗುರು ಅಧ್ಯಯನ ಪೀಠದ ಸದಸ್ಯರಾದ ಸತೀಶ್ ಕರ್ಕೇರ,ಮೋಹನ್‌ರಾಜ್. ಕೆ.ಆರ್,ನಮಿತಾ ಶ್ಯಾಮ್,ಶ್ರೀ ಕ್ಷೇತ್ರ ಗೆಜ್ಜೆಗಿರಿಯ ಅಧ್ಯಕ್ಷರಾದ ರವಿ ಚಿಲಿಂಬಿ,ಗ್ರಾಮಚಾವಡಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷರಾದ ವಿಜೇತ್ ಪಜೀರು,ಯುವ ವಾಹಿನಿ ಕೊಲ್ಯ ಘಟಕದ ಅಧ್ಯಕ್ಷರಾದ ನಿತಿನ್ ಕರ್ಕೇರ,ಪ್ರಮುಖರಾದ ಜಯಶ್ರೀ ಕರ್ಕೇರ,ಕೊಣಾಜೆ ಗ್ರಾ.ಪಂ ಅಧ್ಯಕ್ಷರಾದ ಗೀತಾ ಡಿ.ಕುಂದರ್,ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಮಾಧವಿ ಉಳ್ಳಾಲ್ ಮೊದಲಾದವರು ಉಪಸ್ಥಿತರಿದ್ದರು. ಗ್ರಾಮಚಾವಡಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಮಾಜಿ ಅಧ್ಯಕ್ಷರಾದ ರವೀಂದ್ರ ಬಂಗೇರ ಸ್ವಾಗತಿಸಿ,ನಿರೂಪಿಸಿದರು.ಕೊಲ್ಯ ಬಿಲ್ಲವ ಸೇವಾ ಸಮಾಜದ ಅಧ್ಯಕ್ಷರಾದ ವೇಣುಗೋಪಾಲ್ ಕೊಲ್ಯ ವಂದಿಸಿದರು. ಸೋಮೇಶ್ವರ ಪುರಸಭೆ ಉಪಾಧ್ಯಕ್ಷ ರವಿಶಂಕರ್,ಕೋಟೆಕಾರು ಪ.ಪಂ.ಅಧ–್ಯಕ್ಷರಾದ ದಿವ್ಯಾ ಶೆಟ್ಟಿ ಉಪಸ್ಥಿತರಿದ್ದರು.

## ಟ್ರಾಫಿಕ್ ನಿಯಮ ಉಲ್ಲಂಘನೆ ದಂಡದಲ್ಲಿ ಶೇ.50ರಷ್ಟು ರಿಯಾಯಿತಿ

**ಮಂಗಳೂರು :** ಸರಕಾರದ ಆದೇಶದಂತೆ ಸಾರಿಗೆ ಇಲಾಖೆಯಲ್ಲಿ 1991–92ರಿಂದ 2019–20ರ ಅವಧಿಯಲ್ಲಿ ಹಾಗೂ ಪೊಲೀಸ್ ಇಲಾಖೆಯ ಸಂಚಾರಿ ಇ–ಚಲನ್‌ನಲ್ಲಿ ದಾಖಲಾದ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ.

ಈ ರಿಯಾಯಿತಿಯು ಮುಂದಿನ ರಾಷ್ಟ್ರೀಯ ಲೋಕ ಅದಾಲತ್ ಡಿ.13ರ ನಿಟ್ಟಿನಲ್ಲಿ ಆದೇಶಿಸಲಾಗಿದೆ. ನ.21 ರಿಂದ ಡಿಸೆಂಬರ್ 12ರವರೆಗೆ ಬಾಕಿ ಇರುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ. ಆದುದರಿಂದ ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಂಡು ಮೇಲೆ ಕಾಣಿಸಿದ ಪ್ರಕರಣಗಳಿಗೆ ಶೇ.50 ರಿಯಾಯಿತಿಯಲ್ಲಿ ದಂಡ ಪಾವತಿಸುವ ಮೂಲಕ ತಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಮಾದಕ ವಸ್ತು ಸೇವನೆ ಆರೋಪಿ ಬಂಧನ

**ಉಳ್ಳಾಲ :** ಮಾದಕ ವಸ್ತುವನ್ನು ಸೇವಿಸಿ, ಅಕ್ಕರೆ ಕೆರೆ ಪರಿಸರದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗುವ ರೀತಿಯಲ್ಲಿ ವರ್ತಿಸುತ್ತಿದ್ದ ವ್ಯಕ್ತಿಯೊರ್ವನನ್ನು ಉಳ್ಳಾಲ ಪೊಲೀಸರು ಬಂಧಿಸಿದ್ದಾರೆ.ಬಂಧಿತನನ್ನು ಅಕ್ಕರೆ ಕೆರೆ ನಿವಾಸಿ ಮುಹಮ್ಮದ್ ಶಾಝಿಲ್(29) ಎಂದು ಗುರುತಿಸಲಾಗಿದೆ. ಉಳ್ಳಾಲ ಠಾಣಾ ಪಿಎಸ್ಐ ಕೃಷ್ಣ ಕೆ ಹೆಚ್‌ರವರು ಸಿಬ್ಬಂದಿ ಜೊತೆಯಲ್ಲಿ ಈತನನ್ನು ಬಂಧಿಸಿ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕವಸ್ತು ಸೇವಿಸಿರುವುದು ದೃಢಪಟ್ಟಿದೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಮಿಯ್ಯತುಲ್ ಫಲಾಹ್ ಗ್ರೀನ್ ವ್ಯೂ ವಿದ್ಯಾ ಸಂಸ್ಥೆಯಲ್ಲಿ ಗ್ರೀನೋವೇಟ್–2025

**ಅಡ್ಕರೆಪಡ್ಪು:** ಜಮಿಯ್ಯತುಲ್ ಫಲಾಹ್ ಗ್ರೀನ್ ವ್ಯೂ ವಿದ್ಯಾ ಸಂಸ್ಥೆ ಅಡ್ಕರೆಪಡ್ಪುವಿನಲ್ಲಿ ಗ್ರೀನೋವೇಟ್–2025 ಎಟಿಎಲ್

ಮತ್ತು ರೊಬೋಟಿಕ್ಸ್ ವಿಜ್ಞಾನ ಮೇಳವನ್ನು ಆಯೋಜಿಸಲಾಯಿತು.ಉದ್ಘಾಟನಾ ಕಾರ್ಯಕ್ರಮವನ್ನು ಯೆನೆಪೋಯ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್ ನಿರ್ದೇಶಕ ಪ್ರೊ.ಸಿನಾನ್ ಝಕಾರಿಯಾ ಉದ್ಘಾಟಿಸಿದರು.



ಕಲಾ ವಸ್ತು ಪ್ರದರ್ಶನವನ್ನು ಜಮಿಯ್ಯತುಲ್ ಫಲಾಹ್ ಜಿಲ್ಲಾಧ್ಯಕ್ಷರಾದ ಅಶ್ಫಾಕ್ ಅಹ್ಮದ್ ಕಾರ್ಕಳ, ಸಾಹಿತ್ಯ ವಸ್ತು ಪ್ರದರ್ಶನವನ್ನು ಜಮಿಯ್ಯತುಲ್ ಫಲಾಹ್ ಓಖಿಗ ಮುಖ್ಯಸ್ಥ ಅಶ್ಫಾಕ್ ಅಹ್ಮದ್ ಹಾಗೂ ಗಣಿತ ವಸ್ತು ಪ್ರದರ್ಶನವನ್ನು ಜಿಲ್ಲಾಕೋಶಾಧಿಕಾರಿ ಅಬ್ದುನ್ನಾಸಿರ್ ಕೆ.ಕೆ. ಉದ್ಘಾಟಿಸಿದರು.

ಮುಖ್ಯ ಕಾರ್ಯದರ್ಶಿ ಮುಹಮ್ಮದ್ ಹನೀಫ್ ಸೇರಿದಂತೆ ಜಮಿಯ್ಯತುಲ್ ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳ ಹಾಗೂ ಪದಾಧಿಕಾರಿಗಳ ಸ್ವಾಗತವನ್ನು ಸಂಚಾಲಕ ಪರ್ವೇಜ್ ಅಲಿ ನಿರ್ವಹಿಸಿದರು. ಪ್ರಾಂಶುಪಾಲ ಅಬೂಬಕ್ಕರ್ ಕೆ. ಕಾರ್ಯಕ್ರಮವನ್ನು ನಿರೂಪಿಸಿದರು. ಅಟಲ್ ಟಿಂಕರಿಂಗ್ ಕನ್ವೀನರ್ ಖಲೀಲ್ ಇಬ್ರಾಹಿಂ ಧನ್ಯವಾದ ಅರ್ಪಿಸಿದರು.

## ಅಪಘಾತದಲ್ಲಿ ಗಾಯಗೊಂಡಿದ್ದ ಜಲಾಲುದ್ದೀನ್ ಹುಮೈದಿ ನಿಧನ

**ಉಳ್ಳಾಲ:** ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಿನ್ಯದ ಮೀಂಪ್ರಿ ನಿವಾಸಿ ಮೃತಪಟ್ಟಿದ್ದಾರೆ. ಮಂಜನಾಡಿ ಇಬ್ರಾಹೀಂ ಮದನಿ ಕಾಮಿಲ್ ಸಖಾಫಿ ಎಂಬವರ ಪುತ್ರ ಜಲಾಲುದ್ದೀನ್ ಹುಮೈದಿ(28) ಮೃತಪಟ್ಟವರು. ಉಡುಪಿ ಖಾಝಿ ಶೈಖುನಾ ಮಾಣಿ ಉಸ್ತಾದ್



ರ ಮೊಮ್ಮಗರಾಗಿರುವ ಜಲಾಲುದ್ದೀನ್ ಹುಮೈದಿ ಇತ್ತೀಚೆಗೆ ಚಿಕ್ಕಮಗಳೂರಿನ ಎನ್.ಆರ್. ಪುರದಲ್ಲಿ ನಡೆದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ದೇರಳಕಟ್ಟೆಯ ಖಾಸಗಿ ಆಸ್ಪತ್ರೆಯಲ್ಲಿ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಕೊನೆಯುಸಿರೆಳೆದಿದ್ದಾರೆ. ಪ್ರತಿಭಾನ್ವಿತ ಯುವ ವಿದ್ವಾಂಸರಾಗಿದ್ದ ಜಲಾಲುದ್ದೀನ್ ಹುಮೈದಿಯವರು ಉಪ್ಪಳ್ಳಿ ಶಾದುಲಿ ಜುಮಾ ಮಸೀದಿಯಲ್ಲಿ ಸೇವಾ ನಿರತರಾಗಿದ್ದರು.

### ದರ್ಗಾ ಕ್ಯಾಂಪಸ್ಸಿಗೆ ಅನುದಾನ ಬಿಡುಗಡೆಗೆ ಸ್ಪೀಕರ್‌ಗೆ ಮನವಿ



ಉಳ್ಳಾಲ: ಸಯ್ಯಿದ್ ಮದನಿ ದರ್ಗಾ ಕ್ಯಾಂಪಸ್‌ಗೆ ನೂತನವಾಗಿ ನಿರ್ಮಿಸಲಿರುವ ಆವರಣ ಗೋಡೆಗೆ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಕರ್ನಾಟಕ ರಾಜ್ಯ ಸಭಾಪತಿ ಯು. ಟಿ. ಖಾದರ್ ರವರಿಗೆ ದರ್ಗಾ ಅಧ್ಯಕ್ಷ ಹನೀಫ್ ಹಾಜಿ ಅವರು ಮನವಿ ಸಲ್ಲಿಸಿದರುಈ ಸಂದರ್ಭದಲ್ಲಿ ದರ್ಗಾ ಉಪಾಧ್ಯಕ್ಷ ಅಶ್ರಫ್ ರೈಟ್ ವೇ ಕೋಶಾಧಿಕಾರಿ ನಾಝಿಂ ಮುಕಚ್ಚೇರಿ ಸಮಿತಿ ಸದಸ್ಯ ಅಬ್ದುಲ್ ಖಾದರ್ ಉಪಸ್ಥಿತರಿದ್ದರು.

## ದೇರಳಕಟ್ಟೆ: ಸರಕಾರಿ ಉದ್ಯೋಗದಿಂದ ಸಮುದಾಯ ನಿರಾಸಕ್ತಿ: ನಾಸೀರ್

**ದೇರಳಕಟ್ಟೆ:** ಮುಸ್ಲಿಂ ಸಮುದಾಯದ ಯುವಕರು ಸರಕಾರಿ ಕೆಲಸದ ಬಗ್ಗೆ ನಿರಾಸಕ್ತಿ ಹೊಂದಿದ ಕಾರಣ ಸರಕಾರಿ ಉದ್ಯೋಗಿಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕಡಿಮೆಯಾಗಿದೆ. ಈ ನಿಟ್ಟಿನಲ್ಲಿ ಶೈಕ್ಷಣಿಕ ಜೀವನದಲ್ಲೇ ಮಾರ್ಗದರ್ಶನ ನೀಡುವ ಅಗತ್ಯವಿದೆ ಎಂದು ಜಮೀಯತುಲ್ ಫಲಾಹ್ ದ.ಕ.ಜಿಲ್ಲಾ ಕೋಶಾಧಿಕಾರಿ ಅಬ್ದುಲ್ ನಾಸೀರ್ ಕೆ.ಕೆ. ಅಭಿಪ್ರಾಯಪಟ್ಟರು.ದೇರಳಕಟ್ಟೆಯ ಅಲ್ ಸಲಾಮ ವತಿಯಿಂದ ನಡೆದ ಸರಕಾರಿ ಉದ್ಯೋಗ ಮಾಹಿತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಜಮೀಯತುಲ್ ಫಲಾಹ್ ಉಳಾಲ ತಾಲೂಕು ಅಧ್ಯಕ್ಷ ಅಬ್ದುಲ್ ರಹ್ಮಾನ್ ಕೋಡಿಜಾಲ್, ಮೇಲ್ತೆನೆ ಅಧ್ಯಕ್ಷ ವಿ.ಇಬ್ರಾಹಿಂ



ನಡುಪದವು ಮಾತನಾಡಿದರು. ಈ ಸಂದರ್ಭ ಶೈಕ್ಷಣಿಕ ಸಾಧನೆಗಾಗಿ ಸಂಸ್ಥೆಯ ಹಳೆ ವಿದ್ಯಾರ್ಥಿನಿ ಆಶುರಾ ಅಳಿಕೆ ಅವರನ್ನು ಅಭಿನಂದಿಸಲಾಯಿತು. ಅಭಿ ಗೌಡ ಬೆಂಗಳೂರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಅಚ್ಚುತ ಗಟ್ಟಿ, ಸಂಸ್ಥೆಯ ಸಂಸ್ಥಾಪಕ ಇಕ್ಬಾಲ್ ಬಾಳಿಲ, ಕರ್ನಾಟಕ ಮುಸ್ಲಿಂ ಭಾಂದವ್ಯ ವೇದಿಕೆ ಅಧ್ಯಕ್ಷ ಝಾಕಿರ್ ಹುಸೈನ್, ಪತ್ರಕರ್ತ ಅನ್ಸಾರ್ ಇನೋಳಿ, ಜೆಡಿಎಸ್ ಮುಖಂಡ ಹೈದರ್ ಪರ್ತಿಪ್ಪಾಡಿ, ನಝೀರ್ ಬೆಳುವಾಯಿ, ಬೆಂಗಳೂರು ಉಪಸ್ಥಿತರಿದ್ದರು.

# ಅಗಲಿದ ಹಿರಿಯ ಬಿಜೆಪಿ ನಾಯಕಿ ಲಲಿತಾ ಸುಂದರ್‌ಗೆ ನುಡಿನಮನ

**ಕೊಲ್ಯ:** ತೊಕ್ಕೊಟ್ಟುವಿನ ಸ್ವಗೃಹದಲ್ಲಿ ಅಲ್ಪಕಾಲದ ಅಸೌಖ್ಯದಿಂದ ನಿಧನರಾದ ಬಿಜೆಪಿ ಮುಖಂಡೆ, ಸಾಮಾಜಿಕ ಕಾರ್ಯಕರ್ತೆ ಎಂದೇ ಖ್ಯಾತಿ ಗಳಿಸಿದ್ದ ಲಲಿತಾ ಡಿ ಸುಂದರ್ ಅವರಿಗೆ ಗೌರವ ನುಡಿ–ನಮನವನ್ನು ಸಲ್ಲಿಸುವ ಸಲುವಾಗಿ ಬಿಜೆಪಿ ವಿಧಾನಸಭಾ ಕ್ಷೇತ್ರ ಮಂಗಳೂರು ವತಿಯಿಂದ ಕೊಲ್ಯದ ಶ್ರೀ ಶಾರದ ಸಭಾ ಭವನದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು.

ಈ ವೇಳೆ ಸಭೆಗೆ ಆಗಮಿಸಿದ್ದ ಎಲ್ಲರೂ ಲಿಲಿತಾ ಡಿ ಸುಂದರ್ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದ್ದಾರೆ. ಬಿಜೆಪಿ ದ.ಕ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ,ಲಿಲಿತಾ ಡಿ ಸುಂದರ್ ಅವರು ನನ್ನಂತ ಅನೇಕ ಕಾರ್ಯಕರ್ತರನ್ನು ಪ್ರೋತ್ಸಾಹಿಸಿ, ಬೆಳೆಸಿದವರು. ಅಂದು ಪೊಲೀಸ್ ಠಾಣೆಯ ಮೆಟ್ಟಿಲೇರಿದ ಸಂದರ್ಭದಲ್ಲಿ ಅಲ್ಲಿಂದ ಬಿಡಿಕೊಂಡು ಬಂದವರು ಇದೇ ಲಲಿತಾ ಅಕ್ಕನವರು. ಬಿಜೆಪಿ ಪಕ್ಷಕ್ಕೆ ಲಲಿತಾ ಅವರ ಕೊಡುಗೆ ಅಪಾರ. ಅವರು ಆಸ್ಪತ್ರೆಯಲ್ಲಿದ್ದರೂ ಪಕ್ಷ ಗೆಲುವ ಬಗ್ಗೆ ಮಾತನಾಡಿದ ದಿಟ್ಟ ಮಹಿಳೆ. ಅವರ ಕೊಡುಗೆ ಅಪಾರ ಎನ್ನುತ್ತಾ ಅವರ ಕಾರ್ಯವೈಖರಿಯನ್ನು ನೆನಪಿಸಿಕೊಳ್ಳುತ್ತಾ ಶ್ಲಾಘಿಸಿದರು.

ಬಳಿಕ ಉಳ್ಳಾಲ ವಿಧಾನ ಸಭಾದ ಮಾಜಿ ಶಾಸಕರಾದ ಜಯರಾಮ್ ಶೆಟ್ಟಿ ನುಡಿನಮನ ಸಲ್ಲಿಸಿ, "ಯಥಾಸ್ಯಂ ಮರಣಂ ಧ್ರುವಂ" ಎಂದರೆ "ಹುಟ್ಟಿದ ಪ್ರತಿ ಜೀವಕ್ಕೂ ಮರಣವು ನಿಶ್ಚಿತ". ಇದು ಜೀವನದ ಅನಿವಾರ್ಯ ಸತ್ಯವನ್ನು ಹೇಳುತ್ತದೆ, ಹುಟ್ಟಿದ ಎಲ್ಲರೂ



ಅಂತಿಮವಾಗಿ ಮರಣಹೊಂದುತ್ತಾರೆ. ಆದರೆ ಲಲಿತಾ ಅವರದ್ದು, ಸಾಯುವ ವಯಸ್ಸಲ್ಲ. ಬಿಜೆಪಿ ಪಕ್ಷ ಬಲಿಷ್ಠಗೊಳಿಸಲು ದಿ.ಲಲಿತಾ ಡಿ ಸುಂದರ್ ಅವರ ಕೊಡುಗೆ ಮಹತ್ವದ್ದಾಗಿದೆ ಎನ್ನುತ್ತಾ ಅವರ ಕಾರ್ಯವೈಖರಿಯನ್ನು ನೆನಪಿಸಿಕೊಂಡರು.

ದಕ್ಷಿಣ ಕನ್ನಡ ಜಿಲ್ಲಾ ಸಂಸದರಾದ ಬ್ರಿಜೇಶ್ ಚೌಟ ಮಾತನಾಡಿ, ಕಳೆದ ಬಾರಿ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಅಭ್ಯರ್ಥಿಯಾಗಿದ್ದಾಗ ಸ್ವತಃ ಲಲಿತಾ ಸುಂದರ್ ಅವರು ಕರೆ ಮಾಡಿ ವಿಚಾರಿಸಿದ್ದರು. ತಾಯಿಯಂತೆ ಮಮತೆಯನ್ನು ತೋರುತ್ತಿದ್ದ ಲಲಿತಾ ಸುಂದರ್ ಅವರು ಒಬ್ಬ ರಾಜಕೀಯದ ದಿಟ್ಟ ಮಹಿಳೆ. ಅವರ ಮಾತೃ ಹೃದಯಕ್ಕೆ ಸೋಲದವರಿಲ್ಲ. ಉಳ್ಳಾಲ ಕ್ಷೇತ್ರಕ್ಕೆ ಲಲಿತಾ ಸುಂದರ್ ಅವರು ವಿಶೇಷವಾದ ಕೊಡುಗೆ ನೀಡಿದ್ದಾರೆ ಎಂದರು.

ಹಿರಿಯ ನಾಯಕರಾದ ಸೀತಾರಾಮ ಬಂಗೇರ ಅವರು ಮಾತನಾಡಿ, ಬಿಜೆಪಿಗಾಗಿ ನಿಷ್ಠೆಯಿಂದ ದುಡಿದ ಹಣ್ಣುಮಗಳು ಲಲಿತಾ ಅವರು. ಬಿಜೆಪಿ ಕಚೇರಿಯನ್ನು ಉಚಿತವಾಗಿ ದಿ.ಲಲಿತಾ ಡಿ ಸುಂದರ್ ಅವರು ನೀಡಿದ್ದಾರೆ. ಅವರ ಕೊಡುಗೆಯನ್ನು ಎಂದಿಗೂ ಮರೆಯಬಾರದು. ಪಾರ್ಟಿಗಾಗಿ ದುಡಿದ ವ್ಯಕ್ತಿಗಳನ್ನು ಸದಾ ನೆನಪಿನಲ್ಲಿರಿಸುವಂತಹ ಪ್ರಯತ್ನವಾಗಲಿದೆ ಎಂದರು.

ಬಿಜೆಪಿ ನಾಯಕರಾದ ಚಂದ್ರಶೇಕರ್ ಉಚ್ಚಿಲ್ ಮಾತನಾಡಿ, 1983 ಉಳ್ಳಾಲ ಸಭಾಕ್ಷೇತ್ರದ ಬಿಜೆಪಿ ಕಚೇರಿಯಾಗುವ ಸಂದರ್ಭದಲ್ಲಿ ಲಲಿತಾ ಸುಂದರ್ ಅವರ ಜೊತೆಗೆ ಸೀತಾರಾಮ ಬಂಗೇರ ಅವರ ಕೊಡುಗೆ ಅಪಾರ. ಆ ಸಂದರ್ಭದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ. ಹಾಗಿರುವಾಗ ಅಧ್ಯಕ್ಷತೆಯ ಜವಾಬ್ದಾರಿಯನ್ನು ಲಲಿತಾ ಅವರು ವಹಿಸಿಕೊಂಡು, ಕಾರ್ಯಕರ್ತರ ವಿಶ್ವಾಸವನ್ನು ಗಳಿಸಿಕೊಂಡಿದ್ದರು ಎಂದರು.

ಬಿಜೆಪಿ ಮುಖಂಡರಾದ ಸಂತೋಷ್ ಕುಮಾರ್ ಬೋಳಿಯಾರ್ ಮಾತನಾಡಿ, ಲಿಲಿತಾ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಭೇಟಿ ನೀಡಿ ಅವರ ಜೊತೆ ಒಂದಿಷ್ಟು ಹಾಸ್ಯವನ್ನು ಮಾಡಿದ್ದೆ. ಇಂದು ಅವರು ದೈವಧೀನರಾಗಿದ್ದಾರೆ. ಲಲಿತಾ ಅವರು ಕೊನೆಗಾದಲ್ಲೂ ತನ್ನ ಸೊಸೆಯನ್ನು ಹೊಗಳುತ್ತಿದ್ದರು. ಅವರ ಅಂತಿಮಯಾತ್ರೆಯಲ್ಲಿ ಸೇರಿದ ಜನದಿಂದಲೇ ಅವರ ಸಾಮಾಜಿಕ ಕೊಡುಗೆ ಎಂತದ್ದು ಎಂಬುವುದು ತಿಳಿಯುತ್ತದೆ ಎಂದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿಯಾದ ದಿನೇಶ್ ಅಮ್ಟೂರು ಮಾತನಾಡಿ, ಉಳ್ಳಾಲದ ಹೆಸರನ್ನು ರಾಜ್ಯದಲ್ಲಿ ಪಸರಿಸಿದಂತಹ ಉಕ್ಕಿನ ಮಹಿಳೆ ಲಲಿತಾ ಡಿ ಸುಂದರ್ ಎಂದರೆ ತಪ್ಪಗಲಾರದು. ಇಂದು ಅವರ ನೆನಪಿಗಾಗಿ ಶ್ರದ್ಧಾಂಜಲಿ ಸಭೆಯನ್ನು ನಡೆಸಲಾಗಿದೆ ಎಂದಿದ್ದಾರೆ.

ಉಳ್ಳಾಲ ಮೊಗವೀರ ಸಮಾಜದ ಅಧ್ಯಕ್ಷರಾದ ಯಶವಂತ್ ಅಮೀನ್ ಮಾತನಾಡಿ, ಒಂದು ಹೂವಿನ ಗಿಡದಲ್ಲಿ ಸಾಮಾನ್ಯವಾಗಿ ಹೂ ಅರಳುತ್ತದೆ ಬಳಿಕ ಬಾಡಿಹೋಗುತ್ತದೆ. ಆದರೆ ಲಲಿತಾ ಸುಂದರ್ ಅವರು ಈ ಮಾತಿಗೆ ವ್ಯತಿರಿಕ್ತರಾಗಿದ್ದಾರೆ. ಅವರು ತಮ್ಮ ಜೀವನವನ್ನು ರಾಷ್ಟ್ರಕ್ಕಾಗಿ, ಬಿಜೆಪಿ ಪಕ್ಷಕ್ಕಾಗಿ ಅರ್ಪಿಸಿದವರು. ಅವರು ಪುನರ್‌ಜನ್ಮ ಪಡೆದು ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಾಗಲಿ ಎಂದು ಆಶಿಸಿದರು.

ಸಭೆಯನ್ನು ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಉಳ್ಳಾಲ ಬಿಜೆಪಿ ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲು ಅವರು, ಕಾಂಗ್ರೆಸ್, ಕಮ್ಯೂನಿಸ್ಟ್ ಅಬ್ಬರದ ಸಂದರ್ಭದಲ್ಲಿ ಬಿಜೆಪಿ ಪಕ್ಷವನ್ನು ಸದೃಢವಾಗಿ ಮುನ್ನಡೆಸಿಕೊಂಡು ಬಂದ ನಾಯಕರ ಪೈಕಿ ಲಲಿತಾ ಡಿ ಸುಂದರ್ ಅವರು ಕೂಡ ಒಬ್ಬರು. ಕಾರ್ಯಕರ್ತರನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ ಮಾತೃ ಹೃದಯಿ ಲಲಿತಾ ಡಿ ಸುಂದರ್ ಎನ್ನುತ್ತಾ ಭಾವನಾತ್ಮಕ ಕ್ಷಣಗಳನ್ನು ಸ್ಮರಿಸಿಕೊಂಡರು.

ದುರ್ಗಾವಾಹಿನಿ ಮಹಿಳಾ ಮಂಡಲದ ಮಾಜಿ ಅಧ್ಯಕ್ಷೆ, ಬಿಜೆಪಿ ಮುಖಂಡೆ ಧನಲಕ್ಷ್ಮೀ ಗಟ್ಟಿ ಮಾತನಾಡಿ, ಲಲಿತಾ ಡಿ ಸುಂದರ್ ಅವರು ನನ್ನ ರಾಜಕೀಯಕ್ಕೆ ವೈಯಕ್ತಿಕವಾಗಿ ಪ್ರೇರಣೆಯಾದವರು. ಕರ್ನಾಟಕದಲ್ಲಿ ಮಹಿಳಾ ಮೋರ್ಛಾ ಸ್ಥಾಪನೆಯಾಗಬೇಕು ಎಂಬ ಸಂದರ್ಭದಲ್ಲಿ ಮಹಿಳಾ ಮೋರ್ಛಾದ ಮೊದಲ ಅಧ್ಯಕ್ಷರಾಗಿ ಪಕ್ಷವನ್ನು ಬಲಿಷ್ಠಗೊಳಿಸಿದರುವ ಲಲಿತಾ ಡಿ ಸುಂದರ್ ಎಂದರು.

ಶ್ರದ್ಧಾಂಜಲಿ ಸಭೆಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ರವೀಂದ್ರ ಶೆಟ್ಟಿ ಉಳಿದೊಟ್ಟು ದಿ। ಲಲಿತಾ ಸುಂದರ್ ಅವರ ಸೊಸೆಯಾದ ಮೀರಾ, ವಕೀಲರಾದ ಮೋಹನ್ ರಾಜ್ ಕೆ ಆರ್ ಉಳ್ಳಾಲ, ದಾಸ್ ಚಾರಿಟೇಬಲ್ ಟ್ರಸ್ಟ್ ಸ್ಥಾಪಾಧ್ಯಕ್ಷರಾದ ಅನಿಲ್ ದಾಸ್, ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ, ಮಂಡಲದ ಪ್ರಧಾನ ಕಾರ್ಯದರ್ಶಿಗಳು, ಭಗತ್ ಸಿಂಗ್ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಜೀವನ್ ಕುಮಾರ್ ತೊಕ್ಕೊಟ್ಟು ಪದಾಧಿಕಾರಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಯುಜಿಸಿ ಅರ್ಹತೆ ಕಡ್ಡಾಯದ ಪರಿಣಾಮ ಅತಿಥಿ ಉಪನ್ಯಾಸಕರಿಗೆ ಆತಂಕ

**ಉಳ್ಳಾಲ:** ವಿ.ವಿ.ಯ ಧನಸಹಾಯ ಆಯೋಗದ (ಯುಜಿಸಿ) ಅರ್ಹತೆ ಆಧಾರದಲ್ಲಿಯೇ ಕಾಲೇಜು ಶಿಕ್ಷಣ ಇಲಾಖೆಯು 2025–26ನೇ ಸಾಲಿನ ಬಾಕಿ ಉಳಿದ ಸೆಮಿಸ್ಟರ್‌ಗಳ ಬೋಧನೆಗೆ ಅತಿಥಿ ಉಪನ್ಯಾಸಕ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ.

ನ್ಯಾಯಾಲಯದ ಸೂಚನೆ ಮೇರೆಗೆ ಯುಜಿಸಿ ಅರ್ಹತೆ ಆಧಾರದಲ್ಲಿ ನೇಮಕಾತಿಯನ್ನು ಸರಕಾರ ಕೈಗೊಂಡಿದೆ. ಆದರೆ ಯುಜಿಸಿ ಮಾನದಂಡದ ಪ್ರಕಾರ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಾವಿರಾರು ಅತಿಥಿ ಉಪನ್ಯಾಸಕರು ನಿರುದ್ಯೋಗಸ್ಥರಾಗಲಿದ್ದಾರೆ ಎಂಬ ಮಾತು ಕೇಳಿಬಂದಿದೆ. ಅವಿಭಜಿತ ದ.ಕ.ಜಿಲ್ಲೆಯಲ್ಲಿ ಸುಮಾರು 400ರಷ್ಟು ಅತಿಥಿ ಉಪನ್ಯಾಸಕರಿದ್ದಾರೆ. ಇದರಲ್ಲಿ ಸುಮಾರು 297 ಅತಿಥಿ ಉಪನ್ಯಾಸಕರು ಮಾತ್ರ ಯುಜಿಸಿ ಅರ್ಹತೆ ಹೊಂದಿದ್ದಾರೆ. ಉಳಿದ ಸುಮಾರು 100ಕ್ಕೂ ಅಧಿಕ ಅತಿಥಿ ಶಿಕ್ಷಕರು ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

" ನಾವು ಸುಮಾರು 15 ವರ್ಷಗಳಿಂದಲೂ ಹೆಚ್ಚಿನ ಸಮಯ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದೇವೆ. 2018ರವರೆಗೆ ಪದವಿ ಕಾಲೇಜುಗಳಿಗೆ ಪಾಠ ಮಾಡಲು ಸ್ನಾತಕೋತ್ತರ ಪದವಿ(ಪಿಜಿ) ಇದ್ದರೆ ಸಾಕು ಎಂದಾಗಿತ್ತು. ಆದರೆ 2018ರ ಯುಜಿಸಿ ಮಾರ್ಗಸೂಚಿ ಪ್ರಕಾರ ಸ್ನಾತಕೋತ್ತರ ಪದವಿ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ರಾಜ್ಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ರಾಜ್ಯ ಅರ್ಹತಾ ಪರೀಕ್ಷೆ (ಕೆಸೆಟ್) ತೇರ್ಗಡೆಯಾಗಿರಬೇಕು. ಪಿಎಚ್‌ಡಿ ಪಡೆದಿರಬೇಕು ಎಮದು ಆಗಿತ್ತು. ಇದರಿಂದ ನಮಗೆ ಸಮಸ್ಯೆಯಾಗಿದೆ ಎಂದು ಅತಿಥಿ ಉಪನ್ಯಾಸಕರು ಬೇಸರ ವ್ಯಕ್ತಪಡಿಸಿದ್ದಾರೆ.

UGC
University Grants Commission

- **ಅವಿಭಜಿತ ದ.ಕ.ಜಿಲ್ಲೆಯಲ್ಲಿ ಸುಮಾರು 297 ಅತಿಥಿ ಉಪನ್ಯಾಸಕರು ಮಾತ್ರ ಯುಜಿಸಿ ಅರ್ಹತೆ ಹೊಂದಿದ್ದಾರೆ.**

### ಅಂಬಿಕಾನಗರ ಬಡಾವಣೆಯ ಕಿರು ಸೇತುವೆ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ

## ಕುಂಪಲದಲ್ಲಿ ಕೆರೆ–ಪಾರ್ಕ್ ನಿರ್ಮಾಣಕ್ಕೆ 5 ಕೋ.ರೂ. ಅನುದಾನ ಮಂಜೂರು: ಸದಾಶಿವ ಉಳ್ಳಾಲ್

**ಉಳ್ಳಾಲ :** ಮಂಗಳೂರು ವಿದಾನಸಭಾ ಕ್ಷೇತ್ರದಲ್ಲಿ ಮೂಡದಿಂದಲೂ ಅಭಿವೃದ್ಧಿ ಕಾಮಗಾರಿ ನಡೆಸಬೇಕೆಂದು ಸ್ಪೀಕರ್ ಖಾದರ್ ಆದೇಶಿಸಿದ್ದು, ಅವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್ ಹೇಳಿದರು.

ಸೋಮೇಶ್ವರ ಪುರಸಭೆ ವ್ಯಾಪ್ತಿಯ ಅಂಬಿಕಾರೋಡ್ ಮೂರನೇ ಅಡ್ಡ ರಸ್ತೆ, ಅಂಬಿಕಾ ನಗರ ಬಡಾವಣೆಯ ರಾಜಕಾಲುವೆಗೆ ಶಾಸಕ ಯು.ಟಿ ಖಾದರ್ ಅವರ ವಿಶೇಷ ಅನುದಾನದಿಂದ ನಿರ್ಮಾಣಗೊಳ್ಳಲಿರುವ ಕಿರು ಸೇತುವೆ ಕಾಮಗಾರಿಗೆ ಭಾನುವಾರದಂದು ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಖಾದರ್ ಅವರ ಆದೇಶದಂತೆ ಈಗಾಗಲೇ ಕುಂಪಲ ಮೂರು ಕಟ್ಟೆಯ ಬೃಹತ್ ಕೆರೆಯ ಪುನರುತ್ಥಾನ ಮತ್ತು ಪಾರ್ಕ್ ನಿರ್ಮಾಣಕ್ಕೆ ಮೂಡದಿಂದ ಐದು ಕೋಟಿ ರೂ. ಅನುದಾನ ಮಂಜೂರಾಗಿದೆ. ಶೀಘ್ರದಲ್ಲೇ ಕಾಮಗಾರಿಗೆ ಸ್ಪೀಕರ್ ಖಾದರ್ ಅವರು



ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ. ಕಿರು ಸೇತುವೆ ನಿರ್ಮಾಣ ಕಾಮಗಾರಿಗೆ ಎಲ್ಲರ ಸಹಕಾರ ಅಗತ್ಯ. ಕಾಮಗಾರಿಯ ಗುಣ ಮಟ್ಟತೆಯನ್ನು ಸ್ಥಳೀಯರೇ ಪರಿಶೀಲಿಸಬೇಕು ಎಂದರು. ಸೋಮೇಶ್ವರ ಪುರಸಭಾ ಅಧ್ಯಕ್ಷ ಕಮಲ, ಉಪಾಧ್ಯಕ್ಷ ರವಿಶಂಕರ ಸೋಮೇಶ್ವರ, ವಿಪಕ್ಷ ನಾಯಕರಾದ ಪುರುಷೋತ್ತಮ ಶೆಟ್ಟಿ ಪಿಲಾರು, ಸದಸ್ಯರಾದ ಪರ್ವಿನ್ ಸಾಜಿದ್, ದೀಪಕ್ ಪಿಲಾರು, ನಾಮ ನಿರ್ದೇಶಿತ ಸದಸ್ಯರಾದ ಶ್ರೀಧರ್ ಆಳ್ವ, ಸ್ಥಳೀಯರಾದ ರೋಷನ್ ಅಂಬಿಕಾರೋಡ್, ಅರುಣ್ ಕುಟಿನ್ಹಾ, ಜೆಎಮ್ ರಾಜೇಶ್ ಮಡಿವಾಳ, ಗುತ್ತಿಗೆದಾರರಾದ ಮಹಮ್ಮದ್ ಇಜಾಝ್ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀ ಮೂಕಾಂಬಿಕಾ ಕನ್‌ಸ್ಟ್ರಕ್ಷನ್ಸ್ 3ನೇ ಕಚೇರಿ ಲೋಕಾರ್ಪಣೆ

**ಮಂಗಳೂರು:** ಶ್ರೀ ಮೂಕಾಂಬಿಕಾ ಕನ್‌ಸ್ಟ್ರಕ್ಷನ್‌ಸ್ ಮೂರನೇ ಕಚೇರಿಯನ್ನು ಸಂಸ್ಥೆಯ ಮಾಲೀಕರಾದ ಉದ್ಯಮಿ ಚಂದ್ರಹಾಸ್ ಪಂಡಿತ್ ಹೌಸ್ ಇವರ ಮಾತೃಶ್ರೀ ಸುಮತಿ ಪದ್ಮನಾಭ ಅವರು ಮಂಗಳೂರು ಕಾರ್‌ಸ್ಟ್ರೀಟ್ ಹೂವಿನ ಮಾರುಕಟ್ಟೆ ಸಮೀಪದ ಅನಂತೇಷ್ ಕಮರ್ಷಿಯಲ್ ಕಟ್ಟಡದ ಮೂರನೇ ಮಹಡಿಯಲ್ಲಿ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಟಿ.ಜಿ ರಾಜಾರಾಮ ಭಟ್ ಅವರು ದೀಪ ಪ್ರಜ್ವಲನೆಗೈಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸಹಕಾರಿ ರತ್ನ ಪುರಸ್ಕೃತರಾದ ಟಿ.ಜಿ. ರಾಜಾರಾಮ್ ಭಟ್ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಯಮ ಕ್ಷೇತ್ರದಲ್ಲಿ ಸಾಧನೆಗೈದು ವಿಶೇಷ ಪ್ರಶಸ್ತಿ ಪುರಸ್ಕೃತರಾಧ ಅಸ್ತ್ರ ಗ್ರೂಪ್





ಮಾಲೀಕ ಲಾಂಚುಲಾಲ್ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭ ನೂತನ ಪ್ರಾಜೆಕ್ಟ್ ದಾಖಲೆಗಳನ್ನು ಕೇಶವ ಅವರಿಂದ ಹಸ್ತಾಂತರಿಸಲಾಯಿತು. "ಶ್ರೀ ಮೂಕಾಂಬಿಕಾ ಕನ್‌ಸ್ಟ್ರಕ್ಷನ್‌ಗಳು ಸತ್ಯನಿಷ್ಠ ಸೇವೆ ಮತ್ತು ಉತ್ತಮ ಮೌಲ್ಯದ ಕೆಲಸಕ್ಕಾಗಿ ಹೆಸರಾಗಿದ್ದು, ಮಂಗಳೂರು ನಗರದಲ್ಲಿ ಪಂಡಿತ್‌ಹೌಸ್, ಕಣೀರ್‌ತೋಟ, ಕೋಡಿಕಲ್ ಸೇರಿದಂತೆ ಅನೇಕ ಕಡೆಗಳಲ್ಲಿ ಗುಣಮಟ್ಟದ ಕಟ್ಟಡ ನಿರ್ಮಾಣಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಮೈಸೂರಿನ ದೊಡ್ಡ ಮಟ್ಟದ ಮಾಲ್ ಮಾದರಿಯ ವಾಣಿಜ್ಯ ಯೋಜನೆಗಳು ಕೂಡ ಸಂಸ್ಥೆಯ ಮಹತ್ವದ ಮೈಲಿಗಲ್ಲುಗಳಾಗಿವೆ. ಇದೀಗ ಪಿಲಾರ್, ಕೋಡಿಕಲ್‌ನಲ್ಲಿ ಪ್ರಗತಿಯಲ್ಲಿರುವ ಪ್ರಮುಖ ಯೋಜನೆ, ಗುಣಮಟ್ಟದ ಕಟ್ಟಡ ನಿರ್ಮಾಣ ಮತ್ತು ಆಕರ್ಷಕ ವಾಸ್ತುಶಿಲ್ಪದ ಮೇಲಿನ ಅವರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರೆ ತಪ್ಪಗಲಾರದು.

- **‘ಶ್ರೀ ಮೂಕಾಂಬಿಕಾ ಕನ್‌ಸ್ಟ್ರಕ್ಷನ್‌ಗಳು ಸತ್ಯನಿಷ್ಠ ಸೇವೆ ಮತ್ತು ಉತ್ತಮ ಮೌಲ್ಯದ ಕೆಲಸಕ್ಕಾಗಿ ಹೆಸರಾಗಿದೆ**
- **ಮಂಗಳೂರು ನಗರದಲ್ಲಿ ಪಂಡಿತ್‌ಹೌಸ್, ಕಣೀರ್‌ತೋಟ, ಕೊಡಿಕಲ್ ಸೇರಿದಂತೆ ಅನೇಕ ಗುಣಮಟ್ಟದ ನಿರ್ಮಾಣಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.**
- **ಮೈಸೂರಿನ ದೊಡ್ಡ ಮಟ್ಟದ ಮಾಲ್ ಮಾದರಿಯ ವಾಣಿಜ್ಯ ಯೋಜನೆಗಳು ಕೂಡ ಸಂಸ್ಥೆಯ ಮಹತ್ವದ ಮೈಲಿಗಲ್ಲುಗಳಾಗಿವೆ.**

ಕಾರ್ಯಕ್ರಮದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಕುಂಪಲ, ದಿ ಮೈಸೂರ್ ಇಲೆಕ್ಟ್ರಿಕಲ್ಸ್ ನಿಕಟಪೂರ್ವ ಅಧ್ಯಕ್ಷ ಸಂತೋಷ ರೈ ಬೋಳಿಯಾರ್, ಕಟ್ಟಡ ಮಾಲೀಕರಾದ ದೇವದಾಸ್ ಶೆಣೈ, ನಿವೃತ್ತ ಪಿಎಫ್ ಅಧಿಕಾರಿ ಅಶೋಕ್ ಉಜ್ಜೋಡಿ, ಎಸ್ ಅಂಡ್ ಎಸ್ ಟೆಕ್ನಾಲಜಿ ಮಾಲೀಕರಾದ ಸಂದೀಪ ಶೇಟ್, ಕೆ.ಟಿ.ಸುವರ್ಣ, ಉದ್ಯಮಿ ಹಾಗೂ ಚಿತ್ರನಿರ್ಮಾಪಕರಾದ ಲಾಂಚುಲಾಲ್, ದೇರಳಕಟ್ಟೆ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆಡಳಿತ ಮೊಕ್ತೇಸರ ಚಂದ್ರಹಾಸ್ ಅಡ್ಯಂತಾಯ, ಸ್ಟ್ರಕ್ಚರಲ್ ಇಂಜಿನಿಯರ್ ಅನಿಲ್ ಹೆಗ್ಡೆ, ಗೋಕುಲ್ ಅಸೋಸಿಯೇಟ್ಸ್’ ಸಂಸ್ಥೆಯ ಆರ್ಕಿಟೆಕ್ಟ್ ಗೋಕುಲ್‌ರಾಜ್, ಸಾಯಿ ಪರಿವಾರ್ ಟ್ರಸ್ಟ್ ನ ಪುರುಷೋತ್ತಮ್ ಕಲ್ಲಾಪು ಉದ್ಯಮಿ ಚಂದ್ರಹಾಸ್ ಅವರ ಪತ್ನಿ ಸರಿತಾ ಚಂದ್ರಹಾಸ್, ಪುತ್ರರಾದ ಕೌಶಿಕ್, ವೈಶಾಖ್, ಸಂಜೀವ, ಪ್ರವೀಣ್ ಎಸ್.ಕುಂಪಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ‘ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್’ ಸೇರಿದ ಶೋಡಶಿ ಫೌಂಡೇಶನ್

**ಮಂಗಳೂರು;** ಎರಡು ದಿನಗಳಿಂದ ನಿರಂತರ 40 ಗಂಟೆಗಳ ಕಾಲ ಹಾಡುವ ಮೂಲಕ ತಂಡವೊಂದು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದೆ. ಹೌದು, ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಹೋಲ್ಡರ್, ಜೀ ಕನ್ನಡದ ಸರಿಗಮ ಖ್ಯಾತಿಯ ಯಶವಂತ್ ಎಂ.ಜಿ. ಮಾರ್ಗದರ್ಶನದಲ್ಲಿ ಶೋಡಶಿ ಫೌಂಡೇಶನ್ ವತಿಯಿಂದ, ಭಾರತೀಯ ಸಂಗೀತ ಲೋಕದ ಗಾಯಕ ದಿ.ಕಿಶೋರ್ ಕುಮಾರ್ ಅವರ ಗೌರವಾರ್ಥವಾಗಿ ಮಂಗಳೂರು ಪುರಭವನದಲ್ಲಿ "ಗಾತಾ ರಹೇ ಮೇರಾ ದಿಲ್" ಎಂಬ ಹೆಸರಿನಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ದೀಪ ಬೆಳಗಿಸುವುದರ ಮೂಲಕ ಡಿ ವೈ ಎಸ್ ಪಿ ಮಹೇಶ್ ಕುಮಾರ್ ಚಾಲನೆ ನೀಡಿದರು. ಮಹಾ ಸಂಗೀತ ಸಂಭ್ರಮದಲ್ಲಿ ನೂರಮೂವತ್ತಕ್ಕೂ ಹೆಚ್ಚು ಹಾಡುಗಾರರು ಭಾಗಿಯಾಗಿದ್ದು, ಈ ಎರಡು ದಿನಗಳ ಕಾರ್ಯಕ್ರಮದಲ್ಲಿ ಕಿಶೋರ್ ಕುಮಾರ್ ಅವರ ಪ್ರಮುಖ ಗೀತೆಗಳೊಂದಿಗೆ 40 ಗಂಟೆಗಳ ನಿರಂತರ ಗಾಯನ ಪ್ರದರ್ಶನ




ನಡೆಯಿತು. ಕಾರ್ಯಕ್ರಮವನ್ನು ಕರ್ನಾಟಕದ ಪ್ರಖ್ಯಾತ ಹಾಗೂ ಗೌರವಾನ್ವಿತ ಗಾಯಕ–ರಿಂದ ನಡೆಸಲಾಗಿದ್ದು, ಸಂಗೀತಾಭಿಮಾನಿಗಳಿಗೆ ಸಾಂಸ್ಕೃತಿಕ ಹಬ್ಬದಂತೆಯೇ ಸಂಭ್ರಮ ನೀಡಿತು. ದಾಖಲೆ ಪೂರೈಸಿದ ಷೋಡಶಿ ಫೌಂಡೇಶನ್‌ಗೆ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ ಮನೀಷ್ ಬಿಷ್ಣೋಯ್, ಶಾಸಕರಾದ ವೇದವ್ಯಾಸ ಕಾಮತ್ ಪ್ರಮಾಣ ಪತ್ರ ವಿತರಿಸಿದ್ರು.

ಕಾರ್ಯಕ್ರಮದಲ್ಲಿ ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಈ ರೀತಿಯ ಪ್ರಯೋಗಗಳು ನಡೆಯುತ್ತಲೇ ಇರುತ್ತದೆ. ದೇವಸ್ಥಾನಗಳಲ್ಲಿ ನಿರಂತರ ಭಜನೆ ಕೂಡಾ ನಡೆಯುತ್ತದೆ. ಆದರೆ ಆಧ್ಯಾತ್ಮಿಕ ಕಾರಣಕ್ಕಾಗಿ ಅದನ್ನು ದಾಖಲೆಗೆ ಬಳಸುವುದಿಲ್ಲ. ಇಂತಹ ಸಾಧನೆಗಳು ಮತ್ತಷ್ಟು ನಡೆಯಬೇಕು. ಇಂತಹ ಕಾರ್ಯಕ್ರಮಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ವ್ಯಕ್ತಪಡಿಸಿದ್ದಾರೆ.

ಬಳಿಕ ಫೇಮಸ್ ಸಿಂಗರ್ ಮಣಿಕಾಂತ ಕದ್ರಿ ಮಾತನಾಡಿ, ಈ ರೀತಿಯ ಕಾರ್ಯಕ್ರಮ ಮಾಡಿರುವುದಕ್ಕೆ ಹೆಮ್ಮೆ ಇದೆ. ಇನ್ನಷ್ಟು ಕಾರ್ಯಕ್ರಮಗಳು ನಡೆಯಲಿದೆ, ಎಸ್ಪಿಬಿ, ರಾಜ್‌ಕುಮಾರ್ ಅವರ ಹಾಡುಗಳೂ ಇರಲಿ ಅಂತ ಹೇಳಿದ್ದಾರೆ.

ಷೋಡಶಿ ಸಂಸ್ಥೆಯ ಸ್ಥಾಪಕಾಧ್ಯಕ್ಷರಾದ ಭರತ್ ಕಾಮತ್ ಪ್ರಾಸ್ತಾವಿಕವಾಗಿ ಮಾತನಾಡಿದ್ದಾರೆ. ಇದೇ ವೇಳೆ ಯಶ್ವಂತ್ ಎಂ.ಜಿ, ಡಾ.ಮನೀಷ್ ಬಿಷ್ಣೋಯ್, ಲಂಚುಲಾಲ್, ಮಣಿಕಾಂತ ಕದ್ರಿ, ರಮೇಶ್ ಚಂದ್ರ, ಶ್ರೀಕಾಂತ ಕಾಮತ್, ವೇಣುಗೋಪಾಲ್ ಪುತ್ತೂರು, ರಂಜನ್ ದಾಸ್, ವಿಶ್ವಾಸ್ ಗುರುಪುರ, ಸತೀಶ್ ಇರಾ, ಡಾ ಶಿವರಾಮ್ ಭಂಡಾರಿ ಅವರನ್ನು ಸನ್ಮಾನಿಸಲಾಯಿತು.

ಇನ್ನು ಈ ಕಾರ್ಯಕ್ರಮದಲ್ಲಿ ಡಾ. ಮನೀಷ್ ಬಿಷ್ಣೋಯ್, ಡಾ. ಶಿವರಾಮ್ ಕೆ. ಭಂಡಾರಿ, ರಮೇಶ್ ಚಂದ್ರ, ರಮೇಶ್. ಕೆ . ಪಾಟೀಲ್, ಅನಿಲ್ ಶೆಟ್ಟಿ ಸೂರಿಂಜೆ, ಮನೋಹರ್ ಶೆಟ್ಟಿ, ಗೋಪಾಲ ಕೃಷ್ಣ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದಾರೆ.

## ಮಂಗಳೂರು: ಬ್ಯಾರಿ ಅಕಾಡಮಿ ಚಮ್ಮನಕ್ಕೆ ಹತ್ತು ಮಂದಿ ಸಾಧಕರ ಆಯ್ಕೆ



**ಮಂಗಳೂರು:** ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ 2022 ಮತ್ತು 2023 ನೇ ಸಾಲಿನ ಬ್ಯಾರಿ ಅಕಾಡಮಿ ಚಮ್ಮನ (ಗೌರವ ಪುರಸ್ಕಾರ)ಕ್ಕೆ ಹತ್ತು ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ.ಅಬ್ದುಲ್ ಸಮದ್ ಬಾವಾ (ಬ್ಯಾರಿ ಸಾಹಿತ್ಯ), ಅನ್ಸಾರ್ ಇನೋಳಿ (ಬ್ಯಾರಿ ಭಾಷೆ), ರಶೀದ್ ನಂದಾವರ (ಬ್ಯಾರಿ ಕಲೆ, ಸಂಸ್ಕೃತಿ), ನಝ್ಮುತ್ತುನ್ನೀಸಾ ಲೈಝ್ (ಬ್ಯಾರಿ ಸಾಹಿತ್ಯ), ಮುಹಮ್ಮದ್ ಅಲಿ ಬಡ್ಡೂರು (ಬ್ಯಾರಿ ಸಂಸ್ಕೃತಿ, ಕಲೆ), ಟಿ.ಎಂ. ಶಹೀದ್ ( ಬ್ಯಾರಿ ಭಾಷೆ– ಸಂಘಟನೆ), ಎಂ.ಪಿ.ಬಶೀರ್ ಅಹ್ಮದ್ (ಬ್ಯಾರಿ ಸಾಹಿತ್ಯ), ಯಾಸೀರ್ ಕಲ್ಲಡ್ಕ (ಬ್ಯಾರಿ ಸಂಸ್ಕೃತಿ ), ಮಲ್ಲಿಕಾ ಶೆಟ್ಟಿ ( ಬ್ಯಾರಿ ಕಲೆ, ಸಂಸ್ಕೃತಿ), ಸೈಫ್ ಕುತ್ತಾರ್ ( ಬ್ಯಾರಿ ಭಾಷೆ) ಆಯ್ಕೆಯಾಗಿದ್ದಾರೆ. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ ಸ್ಥಾಯಿ ಸಮಿತಿ ಸಭೆ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ. ಬ್ಯಾರಿ ಅಕಾಡಮಿ ಚಮ್ಮನವು 10 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ. ಬ್ಯಾರಿ ಅಕಾಡಮಿ ಚಮ್ಮನ ಕಾರ್ಯಕ್ರಮವು ಡಿ.7ರಂದು ಪುತ್ತೂರಿನ ಪುರಭವನದಲ್ಲಿ ನಡೆಯಲಿದೆ ಎಂದು ಅಕಾಡಮಿಯ ಅದ–ಧ್ಯಕ್ಷ ಉಮರ್ ಯು.ಎಚ್. ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಬ್ಯಾನರ್ ಅಳವಡಿಸುವಾಗ ಆಯತಪ್ಪಿ ಬಿದ್ದು ಗಂಭೀರ ಗಾಯಗೊಂಡಿದ್ದ ಪಜೀರು ನಿವಾಸಿ ಚಿಕಿತ್ಸೆ ಫಲಿಸದೆ ಸಾವು

**ಪಜೀರು:** ಬ್ಯಾನರ್ ಅಳವಡಿಕೆ ಕೆಲಸ ನಿರ್ವಹಿಸುತ್ತಿದ್ದಾಗ ಆಯತಪ್ಪಿ ಕೆಳಗೆ ಬಿದ್ದು ಗಂಭೀರ ಗಾಯಗೊಂಡು ಸುರತ್ಕಲ್ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಜೀವನ್ಮರಣ ಸ್ಥಿತಿಯಲ್ಲಿ ಪಜೀರು ಗ್ರಾಮದ ಭಾಸ್ಕರ ಪೂಜಾರಿ ಚಿಕಿತ್ಸೆ ಫಲಕಾರಿಯಾಗದೆ ಇಂದು ಸಾವನ್ನಪ್ಪಿದ್ದಾರೆ.

ನ.11 ರಂದು ಸುರತ್ಕಲ್‌ನಲ್ಲಿ ತನ್ನ ವೃತ್ತಿಯಾದ ಬ್ಯಾನರ್ ಅಳವಡಿಕೆ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ತಲೆಗೆ ಮಾರಣಾಂತಿಕವಾಗಿ ಗಾಯವಾಗಿತ್ತು. ಕೂಡಲೇ ಹತ್ತಿರದ ಮುಕ್ಕದಲ್ಲಿರುವ ಶ್ರೀನಿವಾಸ ಆಸ್ಪತ್ರೆಗೆ ದಾಖಲಿಸಿ ತಲೆಯ ಭಾಗಕ್ಕೆ ಸೂಕ್ತ ಚಿಕಿತ್ಸೆಯನ್ನು ನೀಡಲಾಗುತಿತ್ತು. ಆದರೆ ಇಂದು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಮೃತ ಭಾಸ್ಕರ್ ಪುಜಾರಿ ಕಡು ಬಡತನದ ಕುಟುಂಬದವರಾಗಿದ್ದು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ಚಿಕ್ಕ ಪ್ರಾಯದಲ್ಲೇ ಕುಟುಂಬದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡವರು. ತನ್ನ ಸ್ವಂತ ಪರಿಶ್ರಮದಿಂದ ತನ್ನ ಮೂರು ಸಹೋದರಿಯರಿಗೆ ಮದುವೆ ಮಾಡಿ, ಕಳೆದ 5 ತಿಂಗಳ ಹಿಂದೆ ತೀರಾ ಬಡ ಕುಟುಂಬದ ಹುಡುಗಿಯನ್ನು ವಿವಾಹವಾಗಿರುತ್ತಾರೆ.

ಕಳೆದ ಒಂದು ವಾರದಲ್ಲಿ ಚಿಕಿತ್ಸಾ ವೆಚ್ಚ ಸುಮಾರು 7 ಲಕ್ಷದಷ್ಟು ಆಗಿರುತ್ತದೆ. ತೀರಾ ಗಂಭೀರ ಪರಿಸ್ಥಿತಿಯ ಕಾರಣ ಇನ್ನೂ ಹೆಚ್ಚಿನ ಮೊತ್ತ ಅಗತ್ಯವಿದೆ. ಮನೆಯ ಆಧಾರ ಸ್ಥಂಭವಾಗಿದ್ದ ಮಗನೇ ಆಸ್ಪತ್ರೆಯಲ್ಲಿ ಅರೆ ಪ್ರಜ್ಞಾವಸ್ಥೆಯಲ್ಲಿ ಮಲಗಿರುವಾಗ ಇಷ್ಟೊಂದು ದೊಡ್ಡ ಮೊತ್ತ ಹಣ ಪಾವತಿಸುವುದು ಅವರ ತಾಯಿಗೆ ಅಸಾಧ್ಯವಾಗಿತ್ತು. ಗೆಳೆಯರು ಹಾಗೂ ಕುಟುಂಬಸ್ಥರು ಸಹೃದಯೀ ದಾನಿಗಳ ಮೊರೆ ಹೋಗಿದ್ದರು.

## ಮುದುಂಗಾರುಕಟ್ಟೆ : ಉಚಿತ ಆರೋಗ್ಯ ಶಿಬಿರ

**ಮುಡಿಪು:** ಸುನ್ನಿ ಸೂಡೆಂಟ್ಸ್ ಫೆಡರೇಶನ್ ಮುದುಂಗಾರುಕಟ್ಟೆ ಯೂನಿಟ್ ಇದರ ಆಶ್ರಯದಲ್ಲಿ ಮಾಸಿಕ ಬುರ್ದಾ ಮಜ್ಲಿಸ್ ಬೆಳ್ಳಿಹಬ್ಬದ ಅಂಗವಾಗಿ ಯೆನೆಪೋಯ ಆಯುರ್ವೇದ ವೈದ್ಯಕೀಯ ಕಾಲೇಜು , ಪ್ರಸಾದ್ ನೇತ್ರಾಲಯ ಇವುಗಳ ಸಹಯೋಗದೊಂದಿಗೆ ಮುದುಂಗಾರುಕಟ್ಟೆ ಮಸೀದಿ ವಠಾರದಲ್ಲಿ ಉಚಿತ ವೈದ್ಯಕೀಯ, ಕಣ್ಣಿನ ತಪಾಸಣೆ , ಆಧಾರ್ ಕಾರ್ಡ್, ಕಾರ್ಮಿಕರ ಕಾರ್ಡ್ ನೋಂದಣಿ ಶಿಬಿರ ನಡೆಯಿತು. ಮುದುಂಗಾರುಕಟ್ಟೆ ಖತೀಬ್ ಅಬ್ದುಲ್ ರಹ್ಮಾನ್ ಸಖಾಫಿ ದುಆ ನೆರವೇರಿಸಿದರು. ಜಮಾಅತ್ ಅಧ್ಯಕ್ಷ ಅಬ್ದುಲ್ ರಹ್ಮಾನ್ ಯು. ಎಮ್.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಿರಾಜುದ್ದೀನ್ ಸಖಾಫಿ ಕನ್ಯಾನ, ಯುಕೆ ಅಬೂಬಕ್ಕರ್ ಮದನಿ, ರಮೇಶ್ ಶೇಣವ , ಮಂಜು ಭಂಡಾರಿ ಯಾನೆ ಪದ್ಮನಾಭ ರೈ, ರಂಗನಾಥ ಕೊಂಡೆ, ವಾಸುದೇವ ಭಟ್, ಝಕರಿಯಾ ಸಖಾಫಿ, ಯುಕೆ ಅಬೂಬಕ್ಕರ್ ಮದನಿ, ಯು. ಕೆ.ಅಬೂಬಕರ್ , ಹನೀಫ್ ಹಿಮಮಿ, ಅಬ್ದುಲ್ ರಝಾಕ್ ರಝಾದಿ ಗುರುರಾಜ್ ಭಟ್, ನಾಸೀರ್ ನಡುಪದವು ಮತ್ತಿತರರು ಉಪಸ್ಥಿತರಿದ್ದರು.

### ಯೆನೆಪೋಯ ಇನ್ಸಿಟ್ಯೂಟ್ ಆಫ್ ಆರ್ಟ್ಸ್, ಸಯನ್ಸ್, ಕಾಮರ್ಸ್, ಮ್ಯಾನೇಜ್ ಮೆಂಟ್‌ನ ಪದವಿ ದಿನಾಚರಣೆ

# ಶಿಕ್ಷಣ, ಪರಿಶ್ರಮ, ಕೌಶಲ್ಯಗಳ ಜೊತೆ ಮಾನವೀಯ ಮೌಲ್ಯಗಳೂ ಅಗತ್ಯ: ಡಾ.ಪ್ರಸಾದ್ ಎಸ್.ಎನ್.

**ದೇರಳಕಟ್ಟೆ:** ಜಗತ್ತು ಇಂದು ವಿಜ್ಞಾನ ತಂತ್ರಜ್ಞಾನದ ಪ್ರಭಾವದಿಂದ ವಿಸ್ತೃತವಾಗಿ ಬೆಳೆದು ನಿಂತಿದ್ದು, ಶಿಕ್ಷಣ, ಪರಿಶ್ರಮ, ಕೌಶಲ್ಯಗಳ ಮೂಲಕ ಉತ್ತಮ ಅವಕಾಶಗಳನ್ನು ಪಡೆದುಕೊಳ್ಳಬೇಕು ಜೊತೆಗೆ ಪ್ರಾಮಾಣಿಕತೆ, ಮಾನವೀಯ ಮೌಲ್ಯಗಳ ಮೂಲಕ ಸಮಾಜಕ್ಕೆ ನಮ್ಮದೇ ಕೊಡುಗೆ ನೀಡಬೇಕು ಎಂದು ಮೈಸೂರಿನ ಎಸ್‌ಡಿಎಂ ಇನಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನಿರ್ದೇಶಕ ಡಾ.ಪ್ರಸಾದ್ ಎಸ್.ಎನ್. ಅವರು ಹೇಳಿದರು.ಅವರು ದೇರಳಕಟ್ಟೆಯ ಯೆನೆಪೋಯ ವಿವಿಯ ಯೆಂಡೋರೆನ್ಸ್ ಸಭಾಂಗಣದಲ್ಲಿ ನಡೆದ ಯೆನೆಪೋಯ ಇನ್ಸಿಟ್ಯೂಟ್ ಆಫ್ ಆರ್ಟ್ಸ್, ಸಯನ್ಸ್ ಹಾಗೂ ಕಾಮರ್ಸ್ ಮತ್ತು ಮ್ಯಾನೇಜ್ ಮೆಂಟ್ ಬಲ್ಮಠ, ಕೂಳೂರು ಮಂಗಳೂರು ಇದರ 6ನೇ ಪದವಿ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಜಗತ್ತು ಯಾರಿಗೂ ತಲೆಬಾಗುವುದಿಲ್ಲ.



ಅದಕ್ಕೆ ಬದಲಾಗಿ ನಾವು ಜಗತ್ತಿಗೆ ತಮ್ಮ ಬದ್ಧತೆಯನ್ನು ತೋರಿಸಬೇಕು. ಮಾನಸಿಕ ಶಕ್ತಿ ದೈಹಿಕ ಶಕ್ತಿಯನ್ನು ರೂಪಿಸುತ್ತದೆ. ಉತ್ತಮ ನಡವಳಿಕೆ ಮತ್ತು ಕೊಡುಗೆಯ ಮೂಲಕ ಸಮಾಜದಲ್ಲಿ ಗೌರವವನ್ನು ಸಂಪಾದಿಸುವ ಮನೋಭಾವ ನಮ್ಮದಾಗಬೇಕು ಎಂದರು. ಕೆಎಸ್ ಎ ಯೆನೆಪೋಯ ಇಂಟರ್ ನ್ಯಾಷನಲ್ ಸ್ಕೂಲ್ ಇದರ ಸಿಇಒ ಅರುಣ್ ಎ.ಭಾಗವತ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಇತ್ತೀಚೆಗೆ ಜಗತ್ತು ವಿಜ್ಞಾನ ತಂತ್ರಜ್ಞಾನದ ಮೂಲಕ ಬದಲಾವಣೆ ಕಾಣುತ್ತಿದ್ದು, ಇದಕ್ಕೆ ಪೂರಕವಾಗಿ ನಾವು ಬೆಳೆಯಬೇಕಾದ ಅನಿವಾರ್ಯತೆ ಇದೆ. ತಂತ್ರಜ್ಞಾನ ಮತ್ತು ಮಾನವಶ್ರಮ ಜೊತೆ–ಯಾಗಿ ಸಾಗಿದರೆ ನೈಜ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಯೆನೆಪೋಯ ವಿವಿಯ ಸಹಕುಲಪತಿ ಪ್ರೊ.ಶ್ರೀಪತಿ ರಾವ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಯೋಜಿತ ಕಾರ್ಯ ಯೋಜನೆಗಳೊಂದಿಗೆ ಮುನ್ನಡೆಯಬೇಕು. ಉತ್ತಮ ಸಂವಹನ, ಕೌಶಲ್ಯಗಳು, ಮೌಲ್ಯಗಳು ಭವಿಷ್ಯಕ್ಕೆ ಅವಕಾಶಗಳನ್ನು ಒದಗಿಸಿಕೊಡುತ್ತದೆ ಎಂದರು. ಯೆನೆಪೋಯ ಇನ್ಸಿಟ್ಯೂಟ್ ಆಫ್ ಆರ್ಟ್ಸ್, ಸಯನ್ಸ್ ಹಾಗೂ ಕಾಮರ್ಸ್ ಮತ್ತು ಮ್ಯಾನೇಜ್ ಮೆಂಟ್ ನ ಪ್ರಾಂಶುಪಾಲರಾದ ಡಾ.ಜೀವನ್ ರಾಜ್ ಉಪಸ್ಥಿತರಿದ್ದರು. ಕಾಮರ್ಸ್ ಮ್ಯಾನೇಜ್ಮೆಂಟ್‌ನ ಡೀನ್ ಡಾ.ಶರೀನಾ ಪಿ ಸ್ವಾಗತಿಸಿದರು. ಉಪಪ್ರಾಂಶುಪಾಲರಾದ ನಾರಾಯಣ ಸುಕುಮಾರ ವಂದಿಸಿದರು.ಉಪನ್ಯಾಸಕರಾದ ಡಾ.ಶರೀನ ಶೇಖ್, ಚರಿತ್ರಾ ರೈ, ಪಿನಾಕಿನಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

- **ಯೆನೆಪೋಯ ಇನ್ಸಿಟ್ಯೂಟ್ ಆಫ್ ಆರ್ಟ್ಸ್, ಸಯನ್ಸ್ ಹಾಗೂ ಕಾಮರ್ಸ್ ಮತ್ತು ಮ್ಯಾನೇಜ್ ಮೆಂಟ್ ಬಲ್ಮಠ, ಕೂಳೂರು ಮಂಗಳೂರು ಇದರ 6ನೇ ಪದವಿ ದಿನಾಚರಣೆ**
- **ಉತ್ತಮ ನಡವಳಿಕೆ ಕೊಡುಗೆ–ಯ ಮೂಲಕ ಸಮಾಜದಲ್ಲಿ ಗೌರವವನ್ನು ಸಂಪಾದಿಸುವ ಮನೋಭಾವ ನಮ್ಮದಾಗಬೇಕು**
- **ಇತ್ತೀಚೆಗೆ ಜಗತ್ತು ವಿಜ್ಞಾನ ತಂತ್ರಜ್ಞಾನದ ಮೂಲಕ ಬದಲಾವಣೆ ಕಾಣುತ್ತಿದ್ದು, ಇದಕ್ಕೆ ಪೂರಕವಾಗಿ ನಾವು ಬೆಳೆಯ ಬೇಕಾದ ಅನಿವಾರ್ಯತೆ ಇದೆ.**

## ಗ್ರಾ.ಪಂ.ಗಳಲ್ಲಿ ದೂರು ಸಹಾಯವಾಣಿಗೆ ಬೇಡಿಕೆ: ಸುಳ್ಯದಂತೆ ಉಳ್ಳಾಲ ತಾಲೂಕಿನಲ್ಲಿಯೂ ಜಾರಿಯಾಗಲಿ

**ಸುಳ್ಯ:** ತಾಲೂಕಿನ ಯುವಕರ ಒಗ್ಗಟ್ಟಿನ ಬೇಡಿಕೆ ಸುಳ್ಯ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸಲು ಸಹಾಯವಾಣಿ ವಾಟ್ಸಪ್ ಸಂಖ್ಯೆ ಪ್ರತಿಯೊಂದು ಗ್ರಾ.ಪಂ. ಕಡ್ಡಾಯವಾಗಿ ನೀಡಬೇಕು ಎಂದು ಸ್ಥಳೀಯ ಯುವಕರು ಒಟ್ಟಾಗಿ ಬೇಡಿಕೆ ಇಟ್ಟಿದ್ದಾರೆ. ಇದೇ ರೀತಿ ಉಳ್ಳಾಲ ತಾಲೂಕಿನ ಗ್ರಾಮ ಪಂಚಾಯ ತುಗಳಲ್ಲಿಯೂ ಜಾರಿಯಾಗಲಿ ಅನ್ನುವ ಅಭಿಪ್ರಾಯ ಸಾರ್ವಜನಿಕ ವಲಯದಿಂದ ವ್ಯಕ್ತವಾಗಿದೆ.

ಯುವಕರ ಅಭಿಪ್ರಾಯದಲ್ಲಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ ದೂರು ನೀಡುವ ವ್ಯವಸ್ಥೆ ಸ್ಪಷ್ಟವಾಗಿಲ್ಲದ ಕಾರಣ ಕುಡಿಯುವ ನೀರು, ದಾರಿ ದೀಪ, ರಸ್ತೆ ನಿರ್ವಹಣೆ, ಚರಂಡಿ, ಕಸ ವಿಲೇವಾರಿ, ಕಟ್ಟಡ ನಿರ್ಮಾಣ ಅನುಮತಿ, ಮನೆ ತೆರಿಗೆ ಆನ್ಲೈನ್ ವಿಚಾರಗಳು ಜನರಿಗೆ ಸಮಯಕ್ಕೆ ತಲುಪದೇ



- **ಪ್ರತಿಯೊಂದು ಪಂಚಾಯತ್ ಸಹಾಯವಾಣಿ ವಾಟ್ಸಪ್ ಸಂಖ್ಯೆ ಜೊತೆಗೆ ಉನ್ನತ ಅಧಿಕಾರಿಗಳ ಸಂಪರ್ಕ ಸಂಖ್ಯೆಯನ್ನೂ ಸಾರ್ವಜನಿಕರಿಗೆ ಪ್ರಕಟಿಸಬೇಕು ಎಂಬುದು ಅವರ ಆಗ್ರಹ.**

ಸಮಸ್ಯೆಗಳು ಮುಂದುವರಿಯುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಪಂಚಾಯತ್ ಸಹಾಯವಾಣಿ ವಾಟ್ಸಪ್ ಸಂಖ್ಯೆ ಜೊತೆಗೆ ಉನ್ನತ ಅಧಿಕಾರಿಗಳ ಸಂಪರ್ಕ ಸಂಖ್ಯೆಯನ್ನೂ ಸಾರ್ವಜನಿಕರಿಗೆ ಪ್ರಕಟಿಸಬೇಕು ಎಂಬುದು ಅವರ ಆಗ್ರಹ. ಇದರಿಂದ ಪಾರದರ್ಶಕತೆ, ಜವಾಬ್ದಾರಿ ಹಾಗೂ ಸೇವಾ ವೇಗ ಹೆಚ್ಚುತ್ತದೆ ಎಂದು ಯುವಕರ ನಂಬಿಕೆ. ಡಿಜಿಟಲ್ ಇಂಡಿ–ಯಾ ಯುಗದಲ್ಲಿ ಸುಳ್ಯ ತಾಲೂಕು ಕೂಡ ನವೀನ ಸೌಲಭ್ಯಗಳೊಂದಿಗೆ ಮುನ್ನಡೆಯಬೇಕು ಎಂಬ ಅಭಿಪ್ರಾಯ ಯುವಕರಲ್ಲಿದೆ. ಪಕ್ಷ ಬೇಧವಿಲ್ಲದೆ ಅಭಿವೃದ್ಧಿ ಪರವಾಗಿರುವ ವಿವಿಧ ಸಮುದಾಯದ ಯುವಕರು ಈ ಬೇಡಿಕೆಯನ್ನು ಒಂದೇ ಧ್ವನಿಯಲ್ಲಿ ಮುಂದಿಟ್ಟಿದ್ದಾರೆ. ಸಾರ್ವಜನಿಕ ಹಿತವನ್ನು ಗಮನಿಸಿ, ಈ ಕ್ರಮವನ್ನು ಶೀಘ್ರ ಜಾರಿಗೊಳಿಸುವಂತೆ ಅವರು ಶಾಸಕರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ ಪಂಚಾಯತ್ ರಾಜ್ ಇಲಾಖೆ ಹಾಗೂ ದ.ಕ ಜಿಲ್ಲೆಯ ಪಂಚಾಯತ್ ಆಡಳಿತ ಹಾಗೂ ಜಿಲ್ಲಾ ಆಡಳಿತವನ್ನು ಕೋರುತ್ತಿದ್ದಾರೆ.

## ಮಂಗಳೂರು ವಿವಿಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಣೆ



**ಕೊಣಾಜೆ:** ಮಂಗಳೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮ ಮಂಗಳೂರು ವಿಶ್ವವಿದ್ಯಾನಿಲಯದ ಯು.ಆರ್. ರಾವ್ ಸಭಾಂಗಣದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಡೀನ್ ಮಂಜಯ್ಯ ಡಿ.ಎಚ್. ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಡಂತ್ಯಾರ್ ಸೇಕ್ರೇಡ್ ಹಾರ್ಟ್ ಕಾಲೇಜಿನ ನಿವೃತ್ತ ಹಿರಿಯ ಗ್ರಂಥಪಾಲಕರಾದ ಪೌಲ್ ಮಿನೇಜಸ್ ಅವರು ಸ್ವಾಫ್ಟ್ ಸ್ಕಿಲ್ ಅನ್ನು ಗ್ರಂಥಾಲಯದಲ್ಲಿ ಯಾವ ರೀತಿ ಉಪಯೋಗಿಸಬೇಕು, ಅದರ ಉಪಯೋಗವೇನು ಎಂಬುದರ ಕುರಿತು ವಿಭಾಗದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಅಧ್ಯಕ್ಷರಾದ ಪ್ರೊ.ಉಮೇಶ್ ನ್ಯಾಕ್ ಪ್ರಾಸ್ತವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿವಿಧ ರೀತಿಯ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ವಿಭಾಗದ ವಿದ್ಯಾರ್ಥಿಗಳಾದ ಹಂಶಿತಾ, ಕಾರ್ಯಕ್ರಮವನ್ನು ನಿರೂಪಿಸಿದರು, ಪ್ರತೀಕ್ಷಾ ಸ್ವಾಗತಿಸಿದರು, ಗೋಕುಲ್ ಕುಮಾರ್ ವಂದಿಸಿದರು.

## ಜಗತ್ತಿನಲ್ಲಿ ತಂತ್ರಜ್ಞಾನ ಪ್ರಭಾವ ಹೆಚ್ಚುತ್ತಿವೆ: ಅಬ್ದುಲ್ ರಾಝಿಕ್ ಆಲಿ

**ಕೊಣಾಜೆ:** ಇದು ತಂತ್ರಜ್ಞಾನದ ಯುಗವಾಗಿದೆ. ಆಧುನಿಕತೆಯೊಂದಿಗೆ ಕೃತಕ ಬುದ್ಧಿಮತ್ತೆ, ರೋಬೋಟಿಕ್ ಮೊದಲಾದ ತಂತ್ರಜ್ಞಾನಗಳ ಕಾರ್ಯವ್ಯಾಪ್ತಿ ವಿಶಾಲವಾಗಿ, ವೇಗವಾಗಿ ಬೆಳವಣಿಗೆಯನ್ನು ಕಾಣುತ್ತಿವೆ. ಆದ್ದರಿಂದ ಯುವ ಸಮುದಾಯ ಶಿಕ್ಷಣದೊಂದಿಗೆ ಕೌಶಲ್ಯ, ಸೃಜನಶೀಲತೆಯ ಮೂಲಕ ತಂತ್ರಜ್ಞಾನ ಯುಗಕ್ಕೆ ಪೂರಕವಾಗಿ ಬೆಳೆಯಬೇಕಿದೆ ಎಂದು ರಾಸಾಫ್ಟ್ ಇನ್ಫೋಟೆಕ್‌ನ ಸ್ಥಾಪಕರು ಹಾಗೂ ಸಿಇಒ ಅಬ್ದುಲ್ ರಾಝಿಕ್ ಆಲಿ ಅವರು ಹೇಳಿದರು. ಅವರು ಕೊಣಾಜೆಯ ಪಿ.ಎ. ಎಂಜಿನಿಯರಿಂಗ್ ಕಾಲೇಜು ಮಂಗಳೂರು, ತನ್ನ ಸಿಲ್ವರ್ ಜುಬಿಲಿ ಸಂಭ್ರಮ ಅಂಗವಾಗಿ, ಕೋ–ಸ್ಕೋಲಾಸ್ಟಿಕ್ ಅಕ್ಟಿವಿಟಿ ಕ್ಲಬ್ ಮೂಲಕ ರಾಷ್ಟ್ರಮಟ್ಟದ ಟೆಕ್ನೋ–ಕಲ್ಚರಲ್ ಸ್ಪರ್ಧೆ “ಪಿಎಸಿಇ ಕನೆಕ್ಟ್ 2K25 ಟೆಕ್‌ದ ಸ್ಟೇಜ್, ಕಲ್ಚರ್ ದ ಬೀಟ್” ಕಾರ್ಯಕ್ರಮವನ್ನು ಗುರುವಾರದಂದು ಉದ್ಘಾಟಿಸಿ ಮಾತನಾಡಿದರು. ಇಂದಿನ ವೇಗದ,




ಸ್ಪರ್ಧಾತ್ಮಕ ಕಾಲದಲ್ಲಿ ಸಮಾಜವನ್ನು ಅರ್ಥ ಮಾಡಿಕೊಳ್ಳುವುದರೊಂದಿಗೆ ಜಗತ್ತಿನ ಪರಿವರ್ತನೆ, ತಂತ್ರಜ್ಞಾನದ ಪ್ರಭಾವಗಳು ಸೇರಿದಂತೆ ದೈನಂದಿನ ಆಗುಹೋಗುಗಳ ಬಗ್ಗೆ ಅರಿವನ್ನು ಹೆಚ್ಚಿಸಿಕೊಂಡು ಸೃಜನಾತ್ಮಕವಾಗಿ ಮುನ್ನಡೆಯಬೇಕು. ಮಂಗಳೂರು ಮೌನವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರವಾಗಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ರಾಜ್ಯದ ಮುಂಚೂಣಿಯಯ ನಗರವಾಗಿ ರೂಪುಗೊಳ್ಳಲಿದ್ದು, ಉದ್ಯೋಗಾವಕಾಶಗಳು ಹೆಚ್ಚಲಿದೆ ಎಂದರು.ಪಿ.ಎ.ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ರಮೀಸ್ ಎಂ.ಕೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಭಾರತ ಅತ್ಯಧಿಕ ಯುವ ಸಮುದಾಯವನ್ನು ಹೊಂದಿರುವ ರಾಷ್ಟ್ರ. ಶಿಕ್ಷಣದ ಅಧ್ಯತೆಯೊಂದಿಗೆ ಆಧುನಿಕ ತಂತ್ರಜ್ಞಾನ, ಅವಕಾಶಗಳ ಬಗ್ಗೆ ಅರಿತು–ಕೊಂಡು ಮುನ್ನಡೆದರೆ ಜೀವನದಲ್ಲಿ ಯಶಸ್ಸನ್ನು ಕಂಡುಕೊಳ್ಳಲು ಸಾಧ್ಯ. ಇಂತಹ ತಂತ್ರಜ್ಞಾನಾಧಾರಿತ ಸ್ಪರ್ಧೆಗಳು ನಮ್ಮಲ್ಲಿ ಹೊಸ ಹುರುಪು ಮೂಡಿಸುತ್ತದೆ ಎಂದರು.ಪಿ.ಎ.ಎಜ್ಯುಕೇಶನ್ ಟ್ರಸ್ಟ್‌ನ ಕ್ಯಾಂಪಸ್ ಎಜಿಎಂ ಸರ್ಫುದ್ದೀನ್, ಪಿ.ಎ.ಇಂಜಿನಿಯರಿಂಗ್ ಕಾಲೇಜಿನ ಉಪಪ್ರಾಂಶುಪಾಲರಾದ ಪ್ರೊ.ಶರ್ಮಿಳಾ ಕುಮಾರಿ, ಪಿ.ಎ.ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಸರ್ಫ್ರಾಝ್ ಹಾಸಿಂ, ಡೀನ್ ಡಾ.ಸಯ್ಯದ್ ಅಮೀನ್ ಅಹ್ಮದ್, ಪರ್ಚೇಸ್ ಮ್ಯಾನೇಜರ್ ಡಾ.ಹಾರಿಸ್ ಟಿ.ಡಿ, ಅಡ್ಮಿಶನ್ ಆಫೀಸರ್ ಶಫಿನಾಝ್ ಸೈಯದ್ ಇಸ್ಮಾಯಿಲ್ ಮೊದಲಾದವರು ಭಾಗವಹಿಸಿದ್ದರು. ಕಾರ್ಯಕ್ರಮ ಸಂಯೋಜಕರಾದ ಪ್ರೊ. ಇಸ್ಮಾಯಿಲ್ ಶಾಫಿ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಯೋಜಕಿ ಅಂಕಿತಾ ಬೇಕಲ್ ವಂದಿಸಿದರು. ಫಾದಿಲ್ ಪ್ರಾರ್ಥಿಸಿದರು. ರುಷದಾ ಫಾತಿಮ ಕಾರ್ಯಕ್ರಮ ನಿರೂಪಿಸಿದರು.ಕಾರ್ಯಕ್ರಮದ ಒಂದು ವಿಭಾಗದಲ್ಲಿ ಟೆಕ್ನಿಕಲ್ ಕ್ವಿಜ್, ಸೈನ್ಸ್ ಮಾದರಿ ತಯಾರಿ, ಟೆಕ್ನಿಕಲ್ ರಂಗೋಲಿ ಮತ್ತು ಪೋಸ್ಟರ್ ತಯಾರಿ ಸ್ಪರ್ಧೆಗಳು ನಡೆದರೆ ಇನ್ನೊಂದು ವಿಭಾಗದಲ್ಲಿ ಹಾಡು, ಮುಖ ಚಿತ್ರಕಲೆ, ಮೈಮ್ ಮತ್ತು ಸ್ಕೆಚಿಂಗ್ ಸ್ಪರ್ಧೆಯು ನಡೆಯಿತು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬನತ್ತಡಿ: ಸುಮಾರು ನೂರರಷ್ಟು ಮಂದಿ ಏಕಾಏಕಿ ಟೆಂಟ್ ಹಾಕಿ ಜಮೀನನ್ನು ಅತಿಕ್ರಮಿಸಲು ಯತ್ನ

**ಉಳ್ಳಾಲ:** ಕೋಟೆಕಾರು ಪಟ್ಟಣ ಪಂಚಾಯತ್‌ನ ಹನ್ನೆರಡನೇ ವಾರ್ಡ್‌ನ ಬನತ್ತಡಿ ಪ್ರದೇಶದ ಸರಕಾರಿ ಕುಮ್ಕಿ ಜಮೀನಿನಲ್ಲಿ ಬೆಳಗ್ಗೆ ಸುಮಾರು ನೂರರಷ್ಟು ಮಂದಿ ಏಕಾಏಕಿ ಟೆಂಟ್ ಹಾಕಿ ಜಮೀನನ್ನು ಅತಿಕ್ರಮಣ ನಡೆಸಲು ಮುಂದಾಗಿದ್ದ ಘಟನೆ ನಡೆದಿದೆ.

ನೂರಾರು ಮಂದಿ ಬನತ್ತಡಿ ಪ್ರದೇಶದ ಸುಮಾರು ಎರಡೂವರೆ ಎಕರೆ ಜಮೀನಿನಲ್ಲಿ ಐದು ಸೆಂಟ್ಸ್‌ನಂತೆ ಜಾಗ ವಿಂಗಡಿಸಿ ತಂತಿಗಳನ್ನು ಕಟ್ಟಿ ಟೆಂಟ್ ಹಾಕಲು ಮುಂದಾಗಿದ್ದರು. ಈ ಬಗ್ಗೆ ಮಾಹಿತಿ ತಿಳಿದು ಕೋ–ಟೆಕಾರು ಪಪಂ ಗ್ರಾಮ ಕರಣಿ–ಕೆ ನವ್ಯಾ, ಉಳ್ಳಾಲ ತಾಲೂಕು ಕಂದಾಯ ನಿರೀಕ್ಷಕ ಪ್ರಮೋದ್ ಮತ್ತು ಉಳ್ಳಾಲ ಪೊಲೀಸರು ಮಧ್ಯಪ್ರವೇಶಿಸಿದ್ದು, ಸರಕಾರಿ ಜಮೀನನ್ನು ಅತಿಕ್ರಮಣ ಮಾಡಲು



ಮುಂದಾಗಿದ್ದವರನ್ನು ತಡೆದಿದ್ದಾರೆ. ಬಳಿಕ ಅವರನ್ನು ಠಾಣೆಗೆ ಕರೆಸಿ ಮಾತುಕತೆ ನಡೆಸಿದ್ದಾರೆ. ಬನತ್ತಡಿ ಎಂಬಲ್ಲಿನ ಸರಕಾರಿ ಕುಮ್ಕಿ ಜಮೀನಿನ 1.25 ಎಕರೆ ಪ್ರದೇಶದಲ್ಲಿ ಕೋಟೆಕಾರು ಪಪಂ ಆಡಳಿತವು ತ್ಯಾಜ್ಯ ನಿರ್ವಹಣಾ ಘಟಕವನ್ನು ನಿರ್ಮಿಸುವ ಯೋಜನೆ ರೂಪಿಸಿತ್ತು. ಯೋಜನೆಗಾಗಿ ಸ್ಥಳವನ್ನು ಸರ್ವೇ ಕೂಡ ಮಾಡಲಾಗಿತ್ತು. ಬನತ್ತಡಿ ಪ್ರದೇಶದ ಸರಕಾರಿ ಕುಮ್ಕಿ ಜಮೀನು ಕೋಟೆಕಾರು ಪಟ್ಟಣ ಪಂಚಾಯತ್ ಹೆಸರಿಗೆ ವರ್ಗಾವಣೆಗೊಂಡಿಲ್ಲ. ಈ ಪ್ರದೇಶದಲ್ಲಿ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಿಸದಂತೆ ಸ್ಥಳೀಯರ ಆಕ್ಷೇಪವೂ ಎದುರಾಗಿತ್ತು. ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿ ಸರಕಾರಿ ಜಾಗದಲ್ಲಿ ಟೆಂಟ್ ಹಾಕುವ ಮೂಲಕ ಜನರು ಪ್ರತಿ–ರೋಧ ತೋರಿಸಿದ್ದಾರೆಂದು ಹೇಳಲಾಗುತ್ತಿದೆ.

ಕೋಟೆಕಾರು ಪಪಂ ಹಾಗೂ ತಾಲೂಕು ಕಂದಾಯ ಅಧಿಕಾರಿಗಳು ಸರಕಾರಿ ಜಾಗದಲ್ಲಿ ಅಳವಡಿಸಲಾಗಿದ್ದ ತಂತಿಗಳನ್ನು ತೆರವುಗೊಳಿಸಿ ಎಚ್ಚರಿಕೆಯ ಫಲಕವನ್ನು ಅಳವಡಿಸಿ ದ್ದಾರೆ. ಮುಂದಿನ ಸೋಮವಾರ ಈ ವಿಚಾರದ ಕುರಿತಂತೆ ಉಳ್ಳಾಲ ತಾಲೂಕು ಪಂಚಾಯತ್ ಕಚೇರಿಯಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಸಭೆ ನಡೆಯಲಿದೆ.

# ತುಳುವರು ಎಂದರೆ ಯಾರು?





ತುಳುನಾಡಿನ ಮೂಲಸಂಸ್ಕೃತಿಯನ್ನು ಹೊತ್ತೊಯ್ಯುವವರೇ ತುಳುವರು. ಈ ಪ್ರಶ್ನೆಗೆ ಸರಳವಾದ ಉತ್ತರವೇ ಯಾರ ಮಾತೃಭಾಷೆ ತುಳು ಆಗಿರುತ್ತದೋ, ಅವರು ತುಳುವರು. ಆದರೆ ತುಳುವೆಂಬ ಗುರುತಿನ ವ್ಯಾಪ್ತಿ ಕೇವಲ ಭಾಷೆಯಿಂದ ಮಾತ್ರ ಸೀಮಿತವಾಗಿಲ್ಲ; ಜೀವನ ಪದ್ಧತಿಯಲ್ಲಿ ಬೆಳೆದಿರುವ ಶತಮಾನಗಳ ಸಂಸ್ಕೃತಿಯ ಸಮಗ್ರ ರೂಪವಾಗಿದೆ. ತುಳುವರ ಜೀವನ ಶೈಲಿ ಕೃಷಿ ಸಂಸ್ಕೃತಿ, ಕಾಡು ಸಂಸ್ಕೃತಿ, ಕಡಲ ಸಂಸ್ಕೃತಿಯ ಅಪೂರ್ವ ಸಂಯೋಜನೆ. ಮಲೆ, ನದಿ, ಸಮುದ್ರ, ಕಾಡು ಇವೆಲ್ಲವೂ ಅವರ ಸಂಸ್ಕೃತಿಯ ಅಂಗಗಳು. ಜನನದಿಂದ ಮದುವೆ, ಮರಣವರೆಗೂ ವಿಶೇಷ ಆಚರಣೆಗಳು, ವಿಧಿವಿಧಾನಗಳ ಮೂಲಕ ಜೀವನದ ಪ್ರತಿಯೊಂದು ಹಂತಕ್ಕೂ ವಿಶೇಷ ಅರ್ಥ ನೀಡಲಾಗಿದೆ. ತುಳುನಾಡಿನಲ್ಲಿ ಮಾಂಸಾಹಾರಿ ಆಹಾರ ಪದ್ಧತಿ ಒಂದು ಮೂಲಭೂತ ಸಂಸ್ಕೃತಿ. ಪ್ರಕೃತಿಯೊಂದಿಗೆ ಬೆರೆತು ಬೇಸಾಯ ಮಾಡಿದ ಜನರು ತಮ್ಮ ಅಗತ್ಯಕ್ಕೆ ತಕ್ಕಂತೆ ಆಯ್ದ ಆಹಾರ ಪದ್ಧತಿಯನ್ನು ರೂಪಿಸಿಕೊಂಡಿದ್ದಾರೆ. ಮಾಂಸಾಹಾರಿಗಳ ಆರಾಧನೆ ಮತ್ತು ದೈವಗಳ ಅಚ್ಚರಣೆ ತುಳುವರ ಧಾರ್ಮಿಕ ಪರಂಪರೆಯ ಜೀವಾಳ. ಭೂತಾರಾಧನೆ, ದೈವ ನೇಮ, ನಾಗಾರಾಧನೆ.ಎಲ್ಲಾ ಈ ಆಚರಣೆಗಳು ಅವರ ಹೃದಯದಲ್ಲಿ ಬೇರೂರಿರುವ ನಂಬಿಕೆಗಳ ಪ್ರತೀಕ. ತುಳುವರಿಗೆ ತಮ್ಮದೇ ಆದ ಪಂಚಾಂಗ ಪದ್ಧತಿ, ಕಾಲಗಣನೆ ಮತ್ತು ಹಬ್ಬ–ಹರಿದಿನಗಳ ವಿಶಿಷ್ಟ ಅಭ್ಯಾಸವಿದೆ. ಏಕಕಾಲದಲ್ಲಿ ಪಾರಂಪರ್ಯ ಮತ್ತು ನೈಸರ್ಗಿಕ ಜೀವನ ಪದ್ಧತಿಯನ್ನೂ ಉಳಿಸಿಕೊಂಡಿರುವ ಅಪರೂಪದ ಸಮುದಾಯವೇ ತುಳುವರು. ತುಳು ಭಾಷೆ ಮಾತನಾಡುವುದೇ ಗುರುತು. ಆದರೆ ತುಳುವರ ಅಸ್ತಿತ್ವವನ್ನು ರೂಪಿಸುವುದು ಅವರ ಸಂಸ್ಕೃತಿ, ಸಂಪ್ರದಾಯ, ನಂಬಿಕೆ ಮತ್ತು ಜೀವನಪದ್ಧತಿ.

# ಕುದ್ರೋಳಿ ಜಾನುವಾರು ವಧಾಗೃಹ ಪುನರಾರಂಭಕ್ಕೆ ಯು.ಟಿ.ಖಾದರ್‌ಗೆ ಮನವಿ



**ಮಂಗಳೂರು:** ನಗರದ ಕುದ್ರೋಳಿಯಲ್ಲಿ ಕಾರ್ಯಾಚರಿಸುತ್ತಿದ್ದ ಜಾನುವಾರು ವಧಾಗೃಹವನ್ನು ಮತ್ತೆ ತೆರೆಯಬೇಕು ಎಂದು ಜಮೀಯತುಲ್ ಸಅದಾ ಅಸೋಸಿಯೇಶನ್ ನ ನಿಯೋಗ ಸ್ಪೀಕರ್ ಯು.ಟಿ.ಖಾದರ್‌ಗೆ ಮನವಿ ಸಲ್ಲಿಸಿದೆ.

ಸುಮಾರು 50 ವರ್ಷಗಳಿಂದ ಕಾರ್ಯಾಚರಿಸುತ್ತಿದ್ದ ಈ ವಧಾಗೃಹವನ್ನು ಕಳೆದ ನಾಲ್ಕು ವರ್ಷದಿಂದ ಮುಚ್ಚಲಾಗಿದೆ. ದ.ಕ.ಜಿಲ್ಲೆಯಲ್ಲಿ ಇದೊಂದೇ ಪರವಾನಿಗೆ ಹೊಂದಿರುವ ವಧಾಗೃಹವಾಗಿದೆ.ಮಂಗಳೂರು ಮಹಾನಗರ ಪಾಲಿಕೆಯ ಆಡಳಿತವು ಇದನ್ನು ದುರಸ್ತಿಪಡಿಸಿಕೊಡುವುದಾಗಿ ಹೇಳಿ ಇದನ್ನು ಮುಚ್ಚಿಸಿದೆ. ಆದರೆ ನಾಲ್ಕು ವರ್ಷದಿಂದಲೂ ಇದನ್ನು ದುರಸ್ತಿಪಡಿಸಿಲ್ಲ. ಸುಸಜ್ಜಿತಗೊಳಿಸಿಲ್ಲ. ಇದರಿಂದ ಮಾಂಸ ವ್ಯಾಪಾರಿಗಳಿಗೆ ಸಮಸ್ಯೆಯಾಗಿದೆ. ಕಾರ್ಮಿಕರು ಕೆಲಸವಿಲ್ಲದೆ ಅತಂತ್ರರಾಗಿದ್ದಾರೆ. ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸ, ಆನಾರೋಗ್ಯ ಮತ್ತು ಮನೆ–ಸಂಸಾರದ ಖರ್ಚು ನಿಭಾಯಿಸಲಾಗದೆ ಆತಂಕಿತರಾಗಿದ್ದಾರೆ ಎಂದು ನಿಯೋಗದ ಮುಖಂಡರು ಸ್ಪೀಕರ್ ಅವರ ಗಮನ ಸೆಳೆದಿದ್ದಾರೆ. ಆರ್ಥಿಕವಾಗಿ ಹಿಂದುಳಿದವರು, ಮಧ್ಯಮ ವರ್ಗದವರಿಗೆ ಕೈಗೆಟಕುವ ದರದಲ್ಲಿ ಈ ಹಿಂದೆ ಪ್ರೊಟೀನ್ಭರಿತ ಗೋ ಮಾಂಸ ದೊರಕುತ್ತಿತ್ತು. ವಧಾಗೃಹ ಮುಚ್ಚಿರುವುದರಿಂದ ಕುರಿಮಾಂಸ, ಕೋಳಿಮಾಂಸ ದರವೂ ಹೆಚ್ಚಾಗಿದೆ. ಜನಸಾಮಾನ್ಯರಿಗೆ ಇದನ್ನು ಖರೀದಿಸುವುದು ಅಸಾಧ್ಯವಾಗಿದೆ. ಹಾಗಾಗಿ ಈ ವಧಾಗೃಹವನ್ನು ದುರಸ್ತಿಗೊಳಿಸಿ ಪುನಃ ಆರಂಭಿಸಬೇಕು ಎಂದು ನಿಯೋಗ ಮನವಿ ಮಾಡಿದೆ. ಅಸೋಸಿಯೇಶನ್ ನ ಅಧ್ಯಕ್ಷ ಜೆ. ಅಬ್ದುಲ್ ಖಾದರ್, ಮುಖಂಡರಾದ ಅಲಿ ಹಸನ್ ಕುದ್ರೋಳಿ, ಮುಸ್ತಾಕ್, ಯೂಸುಫ್ ಸುರತ್ಕಲ್, ಇಸ್ಮಾಯೀಲ್ ಮತ್ತಿತರರು ನಿಯೋಗದಲ್ಲಿದ್ದರು.

## ನಿಧನ ಸುದ್ದಿ

### ಕೊಡುಗೈ ದಾನಿ ಡಾ.ರೊನಾಲ್ಡ್ ಕೊಲಾಸೊ ಅವರಿಗೆ ಮಾತೃ ವಿಯೋಗ

**ಮಂಗಳೂರು :** ಅನಿವಾಸಿ ಭಾರತೀಯ ಉದ್ಯಮಿ, ಕೊಡುಗೈ ದಾನಿ ಡಾ.ರೊನಾಲ್ಡ್ ಕೊಲಾಸೊ ಅವರ ತಾಯಿ ಆಲಿಸ್ ಕೊಲಾಸೊ (97) ಅವರು ಅಲ್ಪಕಾಲದ ಅಸೌಖ್ಯದಿಂದ ಶನಿವಾರ ಮಧ್ಯಾಹ್ನ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.ಆಲಿಸ್ ಕೊಲಾಸೊ ಅವರು ದಿವಂಗತ ಸಂತಾನ್ ಪಿರೇರಾ, ದಿವಂಗತ ಅಸ್ಸಿಸ್ ಪಿರೇರಾ ಅವರ ಪುತ್ರಿ ಹಾಗೂ



ದಿವಂಗತ ಫೇಬಿಯನ್ ಬಿ.ಎಲ್.ಕೊಲಾಸೊ ಅವರ ಪತ್ನಿ.ಅವರು ಪುತ್ರ ಫ್ರೆಡ್ರಿಕ್ ಕೊಲಾಸೊ, ರೊನಾಲ್ಡ್ ಕೊಲಾಸೊ, ಜೋ ಕೊಲಾಸೊ ಹಾಗೂ ಪುತ್ರಿ ಲವೀನ ಅವರನ್ನು ಅಗಲಿದ್ದಾರೆ. ಅವರ ಇನ್ನೊಬ್ಬ ಪುತ್ರಿ ಜೆಸಿಂತಾ ಈ ಹಿಂದೆ ನಿಧನರಾಗಿದ್ದಾರೆ.

ಮಂಗಳವಾರ, ಡಿ.2 ರಂದು ಬೆಳಗ್ಗೆ 10.00ಕ್ಕೆ ಬೆಂಗಳೂರಿನ ಸೇಂಟ್ ಪ್ಯಾಟ್ರಿಕ್ ಚರ್ಚ್ ನಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗುವುದು. 11 ಗಂಟೆಗೆ ಅಂತಿಮ ಸಂಸ್ಕಾರದ ಪೂಜೆ ಪ್ರಾರಂಭವಾಗಲಿದೆ.ಸ್ಪೀಕರ್ ಯು ಟಿ ಖಾದರ್ ಅವರು ಭೇಟಿ ನೀಡಿ ಸಂತಾಪ ಸೂಚಿಸಿದ್ದಾರೆ. ರಾಜ್ಯ ಅಲೈಡ್ ಹೆಲ್ತ್ ಕೌನ್ಸಿಲ್ ಅಧ್ಯಕ್ಷ ಡಾ.ಯು.ಟಿ.ಇಫ್ತಿಕಾರ್, ಸಚಿವ ದಿನೇಶ್ ಗುಂಡೂರಾವ್ ಸಹಿತ ಗಣ್ಯರು ಆಲಿಸ್ ಕೊಲಾಸೊ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ

### ಭಂಡಾರ ಬೈಲ್ ಪದ್ಮಪ್ಪ ನಾಯ್ಕ್ ನಿಧನ

**ಕುತ್ತಾರು:** ಮುನ್ನೂರು ಗ್ರಾಮ ಕುತ್ತಾರ್ ಭಂಡಾರ ಬೈಲ್ ಪದ್ಮಪ್ಪ ನಾಯ್ಕ್ ವಯೋಸಹಜ ಕಾಯಿಲೆ ಯಿಂದ ಸ್ವಗೃಹದಲ್ಲಿ ನಿಧನ ಹೊಂದಿದರು.



ಪದ್ಮಪ್ಪ ನಾಯ್ಕ್ ಮಂಗಳೂರು ಹೆಂಚಿನ ಕಾರ್ಖಾನೆ ಯಲ್ಲಿ ದುಡಿಯುತ್ತ ಅಲ್ಲಿ ಕಾರ್ಮಿಕ ಸಂಘಟನೆಯನ್ನು ಕಟ್ಟಿ ಬೆಳೆಸಿದ್ದರು. ಮಾತ್ರವಲ್ಲ ಕಾರ್ಮಿಕರನ್ನು ಪಕ್ಷ ಸದಸ್ಯರಾಗಿ ಮಾಡಿ ಸಿಪಿಎಂ ಪಕ್ಷದ ಬೆಳವಣಿಗೆಗೆ ಶ್ರಮಿಸಿದ್ದರು. ಸ್ಥಳೀಯವಾಗಿ ಸಾಮಾಜಿಕ ಚಟುವಟಿಕೆಯ ಮುಖಾಂತರ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿ ಗುರುತಿಸಿ ಕೊಂಡಿದ್ದರು. ಮೃತರ ಅಂತಿಮ ದರ್ಶನ ಅವರ ಸ್ವಪ್ಪ ಗೃಹದಲ್ಲಿ ನಡೆದ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಗೌರವ ಸಲ್ಲಿಕೆ ನಡೆಸಲಾಯಿತು. ಪಕ್ಷದ ಜಿಲ್ಲಾ, ಮತ್ತು ಸ್ಥಳೀಯ ಮುಖಂಡರುಗಳಾದ ಸುಕುಮಾರ್ ತೊಕ್ಕೊಟ್ಟು, ಕೃಷ್ಣಪ್ಪ ಸಾಲಿಯಾನ್, ಆನಂದ ದೇಸೋಡಿ, ವಿಶ್ವನಾಥ್ ತೇವುಲ, ಜಯಂತ್ ನಾಯ್ಕ್, ಮಹಾಬಲ್ ದೆಪ್ಪೆಲಿಮಾರ್, ಶೇಖರ್ ಕುಂದರ್, ವಿಕಾಸ್ ಕುತ್ತಾರ್ ಮತ್ತಿತರರು ಉಪಸ್ಥಿತರಿದ್ದರು.

# ತ್ಯಾಜ್ಯ ಮುಕ್ತ ಸುಸ್ಥಿರ ಸ್ವಚ್ಛ ಗ್ರಾಮ ನಿರ್ಮಾಣಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಿಇಒ ಸೂಚನೆ



**ಮಂಗಳೂರು:** ಗ್ರಾಪಂಗಳು ಸಮುದಾಯದ ಸಹಭಾಗಿತ್ವದಲ್ಲಿ ತ್ಯಾಜ್ಯ ಮುಕ್ತ ಸುಸ್ಥಿರ ಸ್ವಚ್ಛ ಗ್ರಾಪಂ ನಿರ್ಮಾಣಕ್ಕೆ ವಿಶೇಷ ಕಾರ್ಯಾಚರಣೆ ಕೈಗೊಳ್ಳಲು ದ.ಕ. ಜಿಪಂ ಸಿಇಒ ಸೂಚಿಸಿದ್ದಾರೆ.

ಪ್ರಸ್ತುತ 322 ಗ್ರಾಮಗಳು ಒಡಿಎಫ್ ಪ್ಲಸ್ ಮಾದರಿ ಗ್ರಾಮಗಳಾಗಿ ಘೋಷಣೆಯಾಗಿದ್ದರೂ ಕೂಡ ರಸ್ತೆ ಬದಿಯ ಚರಂಡಿಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ಲಾಸ್ಟಿಕ್ ಸುಡುವುದು ಮತ್ತು ತ್ಯಾಜ್ಯಗಳನ್ನು ಎಸೆದು ರಾಶಿ ಹಾಕುವುದು ಕಂಡುಬರುತ್ತಿದೆ. ಸ್ವಚ್ಛತೆ ಸಾರ್ವಜನಿಕರ ಹೊಣೆಗಾರಿಕೆ ಆಗಿರುವಂತೆಯೇ ಜನರಲ್ಲಿ ಜಾಗೃತಿ ಮೂಡಿಸಿ ಸ್ವಚ್ಛತೆ ಕಾಪಾಡಲು ಗುಣಮಟ್ಟದ ಸೇವೆ ಕಲ್ಪಿಸುವುದು ಗ್ರಾಪಂ ಆಡಳಿತದ ಕರ್ತವ್ಯವೂ ಆಗಿದೆ. ಗ್ರಾಮದಲ್ಲಿರುವ ಎಲ್ಲಾ ಮನೆಗಳು ವೈಯಕ್ತಿಕ ಕ್ರಿಯಾತ್ಮಕ ಶೌಚಾಲಯಗಳನ್ನು ಹೊಂದಿರಬೇಕು. ಎಲ್ಲಾ ಅಂಗನವಾಡಿ, ಶಾಲೆಗಳು, ಗ್ರಾಪಂ ಕಟ್ಟಡಗಳಲ್ಲಿ ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಕ್ರಿಯಾತ್ಮಕ ಶೌಚಾಲಯ ಗಳಿರಬೇಕು. ಗ್ರಾಮದಲ್ಲಿರುವ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಸೂಕ್ತ ವ್ಯವಸ್ಥೆ ಹೊಂದಿರಬೇಕು. ಗ್ರಾಮ ವ್ಯಾಪ್ತಿಯ ತೆರೆದ ಪ್ರದೇಶದಲ್ಲಿ ಕಲುಷಿತ ನೀರು ನಿಂತಿರಬಾರದು ಹಾಗೂ ಕಸದ ರಾಶಿ ಹೊಂದಿರಬಾರದು. ಮಾದರಿ ಒಡಿಎಫ್ ಗ್ರಾಮ ಎಂದು ಘೋಷಣೆಯಾಗಿರುವ ಬಗ್ಗೆ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂದೇಶಗಳಾದ ಚಿತ್ರಗಳು, ಗೋಡೆ ಬರಹಗಳ ಮೂಲಕ ತಿಳಿಸಬೇಕು ಎಂದು ತಿಳಿಸಿದ್ದಾರೆ.

ಬಾಕಿ ಇರುವ ಗ್ರಾಮಗಳನ್ನು ಒಡಿಎಫ್ ಪ್ಲಸ್ ಮಾದರಿಯನ್ನಾಗಿ ಮಾಡಲು ಅಗತ್ಯ ಕ್ರಮವಹಿಸಬೇಕು. ಪರಿಸರ ಸ್ನೇಹಿ ಮತ್ತು ಏಕ ಬಳಕೆಯ ಪ್ಲಾಸ್ಟಿಕ್ ಮುಕ್ತ ಸಮಾಜದ ನಿರ್ಮಾಣಕ್ಕೆ ಕ್ರಮಕೈಗೊಳ್ಳಬೇಕು. ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಸುಸ್ಥಿರತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ನಿರಂತರ ಮಾಹಿತಿ ಶಿಕ್ಷಣ ಸಂವಹನ ಚಟುವಟಿಕೆಗಳನ್ನು ನಡೆಸಿ, ತೆರೆದ ಪ್ರದೇಶದಲ್ಲಿ ಕಸ ಬೀಳದಂತೆ ಹಾಗೂ ಕಲುಷಿತ ನೀರು ನಿಲ್ಲದಂತೆ ಕ್ರಮವಹಿಸಬೇಕು ಎಂದು ಸೂಚಿಸಿದ್ದಾರೆ. ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಎಲ್ಲಾ ಗ್ರಾಮಗಳಲ್ಲಿ ಮಾಲಿನ್ಯವನ್ನು ತಡೆಗಟ್ಟಲು ಪ್ರಾಸ್ಟಿಕ್ ಮತ್ತಿತರ ಘನ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ತ್ಯಾಜ್ಯ ಮುಕ್ತ ಗ್ರಾಮ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

### ಗ್ರಾಪಂ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮಗಳು

1. ಗ್ರಾಪಂಗಳ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಪಾಡಲು ನೈರ್ಮಲ್ಯ, ಸಲಹಾ ಸಮಿತಿ ಮತ್ತು ಸ್ವಚ್ಛತಾ ಕಾರ್ಯಪಡೆಗಳನ್ನು ಕ್ರಿಯಾಶೀಲಗೊಳಿಸಬೇಕು. 2. ಸ್ವಚ್ಛ ಭಾರತ ಅಭಿಯಾನದ ಆಶಯದಂತೆ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸುವ ಸ್ವಚ್ಛ ಸಂಕೀರ್ಣ ಘಟಕಗಳನ್ನು ಸಮುದಾಯ ಆಧಾರಿತವಾಗಿ ಸಮರ್ಪಕವಾಗಿ ನಿರ್ವಹಿಸ ಬೇಕು. 3. ಗ್ರಾಪಂ ಸದಸ್ಯರು, ಗ್ರಾಮ ಮಟ್ಟದ ಅಧಿಕಾರಿಗಳು, ಶಾಲಾ ಅಭಿವೃದ್ಧಿ ಸಮಿತಿ, ಬಾಲವಿಕಾಸ ಸಮಿತಿ, ಗ್ರಾಮ ನೈರ್ಮಲ್ಯ ಸಮಿತಿ ಸದಸ್ಯರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ಸಂಜೀನಿ ಒಕ್ಕೂಟದ ಸದಸ್ಯರು ಮತ್ತು ಸಖಿಯರು, ಸಂಘ ಸಂಸ್ಥೆಗಳ ಸದಸ್ಯರನ್ನು ಒಳಗೊಂಡ ವಾರ್ಡ್ ಮಟ್ಟದ ಕಾರ್ಯಪಡೆಗಳನ್ನು ರಚಿಸಿ ಕಾರ್ಯಾಚರಿಸಬೇಕು. 4. ಗ್ರಾಪಂ ಕಚೇರಿ, ಶಾಲೆಗಳು, ಅಂಗನವಾಡಿ ಕೇಂದ್ರಗಳು ಮತ್ತು ಗ್ರಾಮಗಳಲ್ಲಿರುವ ಎಲ್ಲಾ ಸರಕಾರಿ ಕಚೇರಿಗಳಲ್ಲಿ ಸ್ವಚ್ಛತೆಯನ್ನು ಕಡ್ಡಾಯವಾಗಿ ಕಾಪಾಡಿಕೊಂಡಿರುವ ಕುರಿತು ಖಾತರಿ ಪಡಿಸಬೇಕು. 5. ಕಾರ್ಯಪಡೆಯ ಸದಸ್ಯರು ತಂಡಗಳಾಗಿ ಎಲ್ಲಾ ಮನೆಗಳು, ವಾಣಿಜ್ಯ ಅಂಗಡಿಗಳಿಗೆ ತೆರಳಿ ಜಾಗೃತಿ ಮೂಡಿಸಬೇಕು. ಕಸದ ಅಸಮರ್ಪಕ ನಿರ್ವಹಣೆಯಿಂದಾಗುವ ಅಪಾಯ ಮತ್ತು ಕಸವನ್ನು ಸಂಪನ್ಮೂಲವಾಗಿ ಪರಿವರ್ತಿ ಸುವ ಸರಳ ಉಪಾಯಗಳ ಬಗ್ಗೆ ತಿಳಿಸಿ ಕೊಡಬೇಕು. 6. ಹಸಿ, ಒಣ, ಅಪಾಯಕಾರಿ ಕಸಗಳ ಸಮರ್ಪಕ ವಿಂಗಡಣೆ ಮತ್ತು ನಿರ್ವಹಣೆಯನ್ನು ಖಾತರಿ ಪಡಿಸಿದ ಮನೆಗಳು, ವಾಣಿಜ್ಯ ಅಂಗಡಿಗಳು ಹಾಗೂ ಸಂಸ್ಥೆಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಸ್ವಚ್ಛತಾ ಸ್ವಯಂ ಘೋಷಣಾ ಪತ್ರಗಳನ್ನು ಸ್ವೀಕರಿಸಬೇಕು. 7. ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಮಾರಾಟ/ಬಳಕೆ ಮಾಡದಂತೆ ಕಟ್ಟುನಿಟ್ಟಿನ ಕ್ರಮವಹಿಸಬೇಕು. 8. ಸ್ವಚ್ಛ ಮನೆ ಸ್ವಯಂ ಘೋಷಣಾ ಪತ್ರ ಸಲ್ಲಿಸಿ. ಸ್ವಚ್ಛತಾ ಸಂಸ್ಕೃತಿಯನ್ನು ಅಳವಡಿಸಿಕೊಂಡ ಕುಟುಂಬಗಳ ಸಮಾವೇಶ ದೊಂದಿಗೆ 'ಗ್ರಾಮ ಸ್ವಚ್ಛತಾ ಸಂಭ್ರಮ' ಕಾರ್ಯಕ್ರಮವನ್ನು ಏರ್ಪಡಿಸಬೇಕು ಹಾಗೂ 'ಬಯಲು ಕಸ ಮುಕ್ತ ಗ್ರಾಮ' ಎಂದು ಘೋಷಿಸಬೇಕು.

# ಘನ ತ್ಯಾಜ್ಯಗಳ ಸಮರ್ಪಕ ನಿರ್ವಹಣೆ ಸುಸ್ಥಿರ ಸ್ವಚ್ಛತೆಗೆ ವಿಶೇಷ ಕಾರ್ಯಾಚರಣೆ: ಸ್ಪೀಕರ್ ಯು.ಟಿ.ಖಾದರ್



**ಕೊಣಾಜೆ:** ಮಂಗಳೂರು ವಿಧಾನಸಭಾ ಕ್ಷೇತ್ರದ ಎಲ್ಲಾ ಪ್ರದೇಶಗಳ ಕುಡಿಯುವ ನೀರು, ರಸ್ತೆ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಸುಸ್ಥಿರ ಸ್ವಚ್ಛತೆಯ ಕಾರ್ಯ ಸಾಧನೆಗೆ ಸ್ಪಷ್ಟ ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ಶೀಘ್ರದಲ್ಲೇ ವಿಶೇಷ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಕರ್ನಾಟಕ ವಿಧಾನ ಸಭಾಧ್ಯಕ್ಷರು ಹಾಗೂ ಮಂಗಳೂರು ವಿಧಾನ ಸಭಾ ಕ್ಷೇತ್ರ ಶಾಸಕರಾದ ಯು.ಟಿ ಖಾದರ್ ತಿಳಿಸಿದ್ದಾರೆ.

ಅವರು ಮುಡಿಪು ಜನ ಶಿಕ್ಷಣ ಟ್ರಸ್ಟ್ ನಲ್ಲಿ ಶಾರದಾ ಆಯುರ್ವೇದ ವೈದ್ಯಕೀಯ ಕಾಲೇಜು ಆಸ್ಪತ್ರೆ ವತಿಯಿಂದ ನಡೆಯುತ್ತಿರುವ 28ನೇ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.

ರೋಗ ಮುಕ್ತ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕಸ ಮುಕ್ತ ಮಾಲಿನ್ಯ ಮುಕ್ತ ಸ್ವಚ್ಛ ಪರಿಸರ ಅತೀ ಅಗತ್ಯ. ಈ ದಿಸೆಯಲ್ಲಿ ಜನ ಶಿಕ್ಷಣ ಟ್ರಸ್ಟ್ ನ ನಿರಂತರ ಸುಸ್ಥಿರ ಸ್ವಚ್ಛತಾ ಕ್ರಿಯಾತ್ಮಕ ಅರಿವಿನ ಅಭಿಯಾನ ಮತ್ತು ಶಾರದಾ ಆಯುರ್ವೇದ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಉಚಿತ ನಿರಂತರ ಆರೋಗ್ಯ ಶಿಬಿರಗಳು ಸುಸ್ಥಿರ ಸ್ವಚ್ಛ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪೂರಕವಾಗಿದೆ ಎಂದರು. ಗ್ರಾಮಾಡಳಿತ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಂಘ ಸಂಸ್ಥೆ ಸಮುದಾಯದ ಸಹಯೋಗದಲ್ಲಿ ಕಸ ಮುಕ್ತ ಗ್ರಾಮ, ಕಸ ಮುಕ್ತ ಕರ್ನಾಟಕ, ವಿಶೇಷ ಕಾರ್ಯಾಚರಣೆ ಉಳ್ಳಾಲ ತಾಲೂಕಿನಿಂದ ಆರಂಭಿಸಲು ಕಾರ್ಯ ಯೋಜನೆ ಬಗ್ಗೆ ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ತಿಳಿಸಿದರು. ಇದೇ ಸಂದರ್ಭದಲ್ಲಿ ಸ್ವಚ್ಛ ಮನೆ ಸ್ವಯಂ ಘೋಷಣೆ ಪತ್ರ ನಮೂನೆ ಬಿಡುಗಡೆಗೊಳಿಸಿ ಕಸ ಮುಕ್ತ ಕಾರ್ಯಾಚರಣೆ ಆರಂಭಿಸಿರುವ ಮುನ್ನೂರು ಗ್ರಾ.ಪಂ ಪ್ರತಿ ನಿಧಿಗಳಿಗೆ ಹಸ್ತಾಂತರಿಸಲಾಯಿತು. ಡಾ.ಅನೂಪ್, ಡಾ.ಶ್ಯಾಮ್ ಸುಂದರ್ ಮತ್ತು ವೈದ್ಯಕೀಯ ತಂಡದವರು ತಪಾಸಣೆ ನಡೆಸಿ ಚಿಕಿತ್ಸೆ ನೀಡಿದರು. ತಾ.ಪಂ. ಮಾಜಿ ಸದಸ್ಯ ಹೈದರ್ ಕೈರಂಗಳ, ಪಂ. ಸದಸ್ಯರಾದ ಅಬ್ದುಲ್ ರಹಿಮಾನ್, ಸಮೀಮ, ಮುರಳಿ, ಉದ್ಯಮಿ ಜಲೀಲ್ ಮೋಂಟುಗೋಳಿ, ಯೋಗ ಶಿಕ್ಷಕ ಜಗದೀಶ್ ಆಚಾರ್ಯ, ಇಸ್ಮಾಯಿಲ್ ಕಣಂತೂರು, ಶಂಕರಿ ಭಟ್, ರಂಜನಿ ಮೊದಲಾದವರು ಉಪಸ್ಥಿತರಿದ್ದರು.

# ಮುಡಿಪು ನವೋದಯ ಬಳಿಯಿಂದ ಪಾತೂರು ರಸ್ತೆಗೆ ಶಿಲಾನ್ಯಾಸ



**ಕೊಣಾಜೆ:** ಬಾಳೆಪುಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಡಿಪು ನವೋದಯ ಬಳಿಯಿಂದ ಪಾತೂರುವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ವಿಧಾನಸಭಾ ಅಧ್ಯಕ್ಷರಾದ ಯು.ಟಿ.ಖಾದರ್ ಅವರು ಶಿಲಾನ್ಯಾಸ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ರಸ್ತೆ, ನೀರು, ವಿದ್ಯುತ್ ವ್ಯವಸ್ಥೆ ಕಲ್ಪಿಸಿದರೆ ಊರಿನ ಅಭಿವೃದ್ಧಿ ಸಾಧ್ಯ. ವಾರದೊಳಗೆ ಎಲ್ಲೂ ಗುಂಡಿಗಳ ರಸ್ತೆ ಕಾಣಲು ಸಿಗದು. ಇದಕ್ಕೆ ಜನಸಾಮಾನ್ಯರು, ಧಾರ್ಮಿಕ ಮುಖಂಡರು, ಸಂಘ– ಸಂಸ್ಥೆಗಳು ಟ್ರೋಲ್ ಮಾಡಿದವರು ಕಾರಣ. ಎಲ್ಲಾದರು ಹೊಂಡಗಳಿರುವ ಫೋಟೋ ಕಳಿಸಿದರೆ ಮುಚ್ಚಲಾಗುವುದು ಎಂದು ಹೇಳಿದರು.

ಮಂಗಳೂರು ನಗರದಿಂದ ಮುಡಿಪುವರೆಗೆ ಕೇವಲ 20 ನಿಮಿಷ ತಲುಪುವಂತಹ ರಸ್ತೆ ಇದ್ದಾಗ ಜನರು ನಗರಕ್ಕೆ ವಲಸೆ ಹೋಗುವುದನ್ನು ತಪ್ಪಿಸಲು ಸಾಧ್ಯ ಎನ್ನುವ ಭಾವನೆ ನಮ್ಮದು. ಇದೀಗ ಮುಡಿಪು ಜಂಕ್ಷನ್ ನಿಂದ ಕೇರಳ ಸಂಪರ್ಕಿಸುವ ರಸ್ತೆ ಸುಸ್ಥಿರವಾಗಿಡಲು ಮೂರು ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದರು. ಆದೂರು ತಂಜಳ್ ಶಿಲಾನ್ಯಾಸ ನೆರವೇರಿಸಿದರು. ಮುಡಿಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಕಾಜವ, ಮುಡಿಪು ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಎನ್.ಎಸ್.ನಾಸೀರ್ ನಡುಪದವು, ಪ್ರಧಾನ ಕಾರ್ಯದರ್ಶಿ ಜಲೀಲ್ ಮೋಂಟುಗೋಳಿ, ಕುರ್ನಾಡು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ದೇವದಾಸ್ ಭಂಡಾರಿ, ಬಾಳೆಪುಣಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೀತಾ ಎಸ್.ಭಂಡಾರಿ, ಉಪಾಧ್ಯಕ್ಷ ಸಿ.ಎಂ.ಶರೀಫ್ ಪಟ್ಟೋರಿ, ಸದಸ್ಯರಾದ ಸಮೀಮಾ, ಅಂಜಲಿ, ಅಬ್ದುಲ್ ರಹ್ಮಾನ್, ಜನಾರ್ದನ ಕುಲಾಲ್, ಯಾಕೂಬ್ ಮುದುಂಗಾರ್, ಉಷಾ, ರಹ್ಮಾನ್ ತೋಟಾಲ್, ಜನಾರ್ದನ ಗಟ್ಟಿ, ಲಿಡಿಯಾ ಡಿಸೋಜ, ಆಸಿಫ್ ಮೋಂಟುಗೋಳಿ, ಹನೀಫ್ ಹೂಹಾಕುವಕಲ್ಲು, ಬಶೀರ್ ಸಾಜಿಗಾರ್, ಮಾಜಿ ಅಧ್ಯಕ್ಷೆ ಸುಕನ್ಯ ರೈ, ಇಬ್ರಾಹಿಂ ತಪ್ಪಿಯಾ ನಡುಪದವು, ಜಗದೀಶ್ ಪಲಾಯಿ, ಅರುಣ್ ಡಿಸೋಜ, ಡಾ.ಸುರೇಖಾ ಮೊದಲಾದವರು ಉಪಸ್ಥಿತರಿದ್ದರು.

# ಮಂಜನಾಡಿ: ದಫ್ ಸ್ಪರ್ಧೆ, ಅಕ್ಕರೆಕೆರೆ ಅಲ್ ಜಝೀರಾ ತಂಡಕ್ಕೆ ಪ್ರಶಸ್ತಿ




**ಮಂಗಳೂರು:** ಮಂಜನಾಡಿ–ಅನ್ಸಾರ್ ನಗರದ ರಿಫಾಯಿಯಾ ಖಿದ್ಮತುಲ್ ಇಸ್ಲಾಂ ದಫ್ ಕಮಿಟಿಯ 15ನೇ ವಾರ್ಷಿಕೋತ್ಸವದ ಪ್ರಯುಕ್ತ ಹೊನಲು ಬೆಳಕಿನ ದಫ್ ಸ್ಪರ್ಧೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನ.22 ರಂದು ರಾತ್ರಿ ಇಲ್ಲಿನ ಮರ್‌ಹೂಂ ಶೈಖುನಾ ಮಂಜನಾಡಿ ಸಿ.ಪಿ. ಉಸ್ತಾದ್ ವೇದಿಕೆಯಲ್ಲಿ ನಡೆಯಿತು.

ಮಂಜನಾಡಿ ಕೇಂದ್ರ ಜುಮಾ ಮಸೀದಿ ಮುದರ್ರಿಸ್ ಅಹ್ಮದ್ ಬಾಖವಿ ದುವಾ ನೆರವೇರಿಸಿದರು. ರಿಫಾಯಿಯಾ ಖಿದ್ಮತುಲ್ ಇಸ್ಲಾಂ ದಫ್ ಕಮಿಟಿ ಗೌರವಾಧ್ಯಕ್ಷ, ಅನ್ಸಾರ್ ನಗರ ಬಿಲಾಲ್ ಮಸೀದಿ ಅಧ್ಯಕ್ಷ ಹಾಜಿ ಎನ್ ಎಸ್ ಕರೀಂ ಅಧ್ಯಕ್ಷತೆ ವಹಿಸಿದ್ದರು. ಕುದುಂಬ್ಲಾಡಿ ಅಲ್–ಮುರ್ಶಿದ್ ಇಸ್ಲಾಮಿಕ್ ಅಕಾಡೆಮಿ ಅಧ್ಯಕ್ಷ ಅಬ್ದುಲ್ ರಝಾಕ್ ಮದನಿ ಅಲ್ಖಾಮಿಲಿ ಉದ್ಘಾಟಿಸಿದರು. ಮಂಜನಾಡಿ ಅಲ್–ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್ ಮ್ಯಾನೇಜರ್ ಅಬ್ದುಲ್ ಖಾದರ್ ಸಖಾಫಿ ಮುಖ್ಯ ಭಾಷಣಗೈದರು.

ಇದೇ ವೇಳೆ ಪಡೀಲ್ ಜನಪ್ರಿಯಾ ಆಸ್ಪತ್ರೆ ಸಿಇಒ ಹಾಗೂ ಡೈರೆಕ್ಟರ್ ಡಾ.ಕಿರಾಶ್ ಪರ್ತಿಪ್ಪಾಡಿ, ನರಿಂಗಾನ ಅಲ್–ಮದೀನಾ ಪಾಲಿಕ್ಲಿನಿಕ್ ಡೈರೆಕ್ಟರ್ ಡಾ.ಮುಹಮ್ಮದ್ ಫಯಾಝ್ ಹಾಗೂ ಕುಟ್ಯಾಡಿ ಜಮೀಯ್ಯತುಲ್ ಹಿಂದ್ ಅಲ್–ಇಸ್ಲಾಮಿಯ್ಯ ಸಂಸ್ಥೆಯಿಂದ ಹಾದಿ ಬಿರುದು ಪಡೆದ ರಿಫಾಯಿಯಾ ಖಿದ್ಮತುಲ್ ಇಸ್ಲಾಂ ದಫ್ ಕಮಿಟಿಯ ಹಳೆ ವಿದ್ಯಾರ್ಥಿ ಹಾಫಿಳ್ ನೌಫಲ್ ಹಾದಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

**ಅಲ್–ಜಝೀರಾ ತಂಡಕ್ಕೆ ಪ್ರಶಸ್ತಿ**

**ಅಂತರ್ ರಾಜ್ಯ ಮಟ್ಟದ ದಫ್ ಸ್ಪರ್ಧಾ ಕೂಟದಲ್ಲಿ ಉಳ್ಳಾಲ–ಅಕ್ಕರೆಕರೆಯ ಅಲ್–ಜಝೀರಾ ದಫ್ ತಂಡ ಪ್ರಥಮ ಸ್ಥಾನ ಪಡೆದರೆ, ರೆಂಜಾಡಿ ತಾಜುಲ್ ಹುದಾ ದಫ್ ತಂಡ ದ್ವಿತೀಯ ಸ್ಥಾನ ಹಾಗೂ ಕೂಳೂರು ಮುಹಿಯುದ್ದೀನ್ ದಫ್ ತಂಡ ತೃತೀಯ ಸ್ಥಾನ ಪಡೆದುಕೊಂಡಿತು.**

ಅನ್ಸಾರ್ ನಗರ ಬಿಲಾಲ್ ಮಸೀದಿ ಇಮಾಂ ಅಬ್ಬಾಸ್ ಸಖಾಫಿ, ನೆಕ್ಕರೆ ಮದ್ರಸ ಅಧ್ಯಕ್ಷ ಅಬ್ದುರ್ರಹ್ಮಾನ್ ಮದನಿ, ಸದರ್ ಮುಅಲ್ಲಿಂ ಝೈನುಲ್ ಆಬಿದೀನ್ ಮದನಿ, ಮಂಗಳೂರು ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಮುಹಮ್ಮದ್ ಮೋನು ಮಲಾರ್, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ದಫ್ ಎಸೋಸಿಯೇಶನ್ ಅಧ್ಯಕ್ಷ ಲತೀಫ್ ನೇರಳಕಟ್ಟೆ, ಪ್ರಧಾನ ಕಾರ್ಯದರ್ಶಿ ಪಿ ಎಂ ಅಶ್ರಫ್ ಪಾಣೆಮಂಗಳೂರು, ಕೊಣಾಜೆ ಪೊಲೀಸ್ ಠಾಣಾ ಪಿಎಸ್ಸೈ ನಾಗರಾಜ್, ಮುಡಿಪು ಸರ್ಕಲ್ ಕೆಎಂಜೆ ಅಧ್ಯಕ್ಷ ಹಾಜಿ ಎಸ್ ಕೆ ಖಾದರ್, ನರಿಂಗಾನ ಗ್ರಾ ಪಂ ಅಧ್ಯಕ್ಷ ನವಾಝ್, ಸದಸ್ಯ ಸಲೀಂ ಪೊಟ್ಟೊಳಿಕೆ, ಮರಿಕ್ಕಳ ಜುಮಾ ಮಸೀದಿ ಅಧ್ಯಕ್ಷ ಜಲೀಲ್ ಮೋಂಟುಗೋಳಿ, ಮಂಜನಾಡಿ ಗ್ರಾ ಪಂ ಮಾಜಿ ಅಧ್ಯಕ್ಷ ಮುಹಮ್ಮದ್ ಅಸ್ಸೈ, ಕೊಣಾಜೆ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ನಝೀರ್, ಶೌಕತ್, ವಕ್ಫ್ ಸಲಹಾ ಸಮಿತಿ ಮಾಜಿ ಉಪಾಧ್ಯಕ್ಷ ಹಾಜಿ ಎನ್ ಎಂ ಅಹ್ಮದ್ ಕುಂಞ (ನೆಕ್ಕರೆ ಬಾವು), ಗುತ್ತಿಗೆದಾರ ನಝೀರ್ ಮದ್ದಾಡಿ, ಅನ್ಸಾರ್ ನಗರ ಬದ್ರಿಯಾ ಮದ್ರಸ ಅಧ್ಯಕ್ಷ ಮನ್ಸೂರ್ ಯು ಎಸ್, ಉಪಾಧ್ಯಕ್ಷ ಮೋನು ಕೊಳ, ಬಿಲಾಲ್ ಮಸೀದಿ ಪ್ರಧಾನ ಕಾರ್ಯದರ್ಶಿ, ಎಂ ಇ ಮೊಯಿದೀನ್ ಕುಂಞ, ಮಂಜನಾಡಿ ಗ್ರಾ ಪಂ ಸದಸ್ಯರಾದ ಇಲ್ಯಾಸ್ ಮೇಗಿನಮನೆ, ಇಸ್ಮಾಯಿಲ್ ಬಾವು, ನೆಕ್ಕರೆ ಅಲ್–ಅಮೀನ್ ಚಾರಿಟಿ ಅಧ್ಯಕ್ಷ ಸನಾವುಲ್ಲಾ, ಮಂಜನಾಡಿ ಸರ್ಕಲ್ ಎಸ್ ವೈ ಎಸ್ ಅಧ್ಯಕ್ಷ ಮೋನು ಕಲ್ಕಟ್ಟ, ಮಂಗಳಾಂತಿ ಎಂಯುಎಂ ಅಧ್ಯಕ್ಷ ಹಮೀದ್ ಕುಚ್ಚಿಗುಡ್ಡೆ, ಉದ್ಯಮಿಗಳಾದ ಅಬ್ದುಲ್ಲ, ಹಾಜಿ ಖಲಂದರ್, ಮೋರ್ಲ ರಿಫಾಯಿಯ ಮಸೀದಿ ಅಧ್ಯಕ್ಷ ಶಂಸು, ಅನ್ಸಾರ್ ನಗರ ಎಸ್ ವೈ ಎಸ್ ಯುನಿಟ್ ಅಧ್ಯಕ್ಷ ವಹಾಬ್, ಅನ್ಸಾರ್ ನಗರ ರಿಫಾಯಿಯ ಖಿದ್ಮತುಲ್ ಇಸ್ಲಾಂ ದಫ್ ಕಮಿಟಿ ಅಧ್ಯಕ್ಷ ಸವಾದ್ ಕೊಳ, ಉಪಾಧ್ಯಕ್ಷರಾದ ಹನೀಫ್ ಹಾಜಿ ಪರಮಾಂಡ, ರಿಯಾಝ್ ಅನ್ಸಾರ್ ನಗರ, ಪ್ರಧಾನ ಕಾರ್ಯದರ್ಶಿ ರಾಶಿದ್, ಮಂಜನಾಡಿ ಸರ್ಕಲ್ ಎಸ್ ವೈ ಎಸ್ ಅಧ್ಯಕ್ಷ ಆಸಿಫ್ ಯು ಎಸ್ ಮೊದಲಾದವರು ಭಾಗವಹಿಸಿದ್ದರು.

ಅನ್ಸಾರ್ ನಗರ ಬದ್ರಿಯಾ ಮದ್ರಸ ಸದರ್ ಮುಅಲ್ಲಿಂ ಉಮರುಲ್ ಫಾರೂಕ್ ಸಖಾಫಿ ಸ್ವಾಗತಿಸಿ, ನೌಫಲ್ ಕುದ್ತಮುಗೇರು ಕಾರ್ಯಕ್ರಮ ನಿರೂಪಿಸಿದರು.

# ದೇರಳಕಟ್ಟೆಗೆ ಕಿರೀಟದ ಕಾಂತಿ!

## ಕಣಚೂರು ಸಂಸ್ಥೆಯಿಂದ ಕ್ಲಾಕ್ ಟವರ್



**ಉದ್ಘಾಟನೆ**

**3 ಡಿಸೆಂಬರ್ 2025**



ಕಡುಬಡತನದಿಂದ ಆರಂಭಿಸಿ ಶ್ರಮ ಮತ್ತು ದೃಢನಿಶ್ಚಯದಿಂದ ಯಶಸ್ಸಿನ ಮಹಾಮಾರ್ಗವನ್ನು ನಿರ್ಮಿಸಿಕೊಂಡ ಡಾ. ಹಾಜಿ ಯು. ಕಣಚೂರು ಮೋನು, ಈಗ ದೇರಳಕಟ್ಟೆ, ನಾಟೆಕಲ್ ಪ್ರದೇಶಕ್ಕೆ ಅಭಿವೃದ್ಧಿಯ ಹೊಸ ಮುಖ ನೀಡುತ್ತಿರುವ ವ್ಯಕ್ತಿ. ಶೈಕ್ಷಣಿಕ ಕ್ರಾಂತಿಯನ್ನು ಆರಂಭಿಸಿದ ಅವರು ಇಂದು ಕಣಚೂರು ಇಸ್ಲಾಮಿಕ್ ಟ್ರಸ್ಟ್ ಮೂಲಕ ಶಿಕ್ಷಣ, ಆರೋಗ್ಯ, ಉದ್ಯಮ, ಸಾಮಾಜಿಕ ಸೇವೆ?ಎಲ್ಲ ಕ್ಷೇತ್ರಗಳಲ್ಲೂ ಹೊಸ ಮಾದರಿಯನ್ನು ನಿರ್ಮಿಸಿದ್ದಾರೆ.

ನಾಟೆಕಲ್ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಸಾವಿರಾರು ಬಡ ಕುಟುಂಬಗಳಿಗೆ ಉಚಿತ/ರಿಯಾಯಿತಿ ಶಿಕ್ಷಣ, ಆರೋಗ್ಯ ಸೇವೆ, ಉದ್ಯೋಗಾವಕಾಶ, ಸಮಾಜಮುಖಿ ನೆರವು, ಈ ಎಲ್ಲವನ್ನು ವರ್ಷಗಳ ಕಾಲ ನಿರಂತರವಾಗಿ ನೀಡುತ್ತಾ ಬಂದಿರುವ ಸಂಸ್ಥೆ ಕಣಚೂರು ಟ್ರಸ್ಟ್.

**ಉದ್ಘಾಟಿಸುವವರು**

**ಮುಖ್ಯಮಂತ್ರಿ ಸಿದ್ದರಾಮಯ್ಯ**

ಡಿಸೆಂಬರ್ 3ರಂದು ದೇರಳಕಟ್ಟೆ ಇತಿಹಾಸದ ಹೊಸ ಪುಟದ ಸಾಕ್ಷಿಯಾಗಿರಿ!



### ಇದೀಗ ದೇರಳಕಟ್ಟೆಗೆ ಮತ್ತೊಂದು ಅಲಂಕಾರ ಐಶ್ವರ್ಯ ತುಂಬುವ 'ಕ್ಲಾಕ್ ಟವರ್'

ಅತ್ಯಾಧುನಿಕ ವಿನ್ಯಾಸದ, ದೇರಳಕಟ್ಟೆಯ ಗುರುತಾಗಿ ಬೆಳಗಲಿರುವ ಕಣಚೂರು ಸಂಸ್ಥೆಯ ಕ್ಲಾಕ್ ಟವರ್, ಡಿಸೆಂಬರ್ 3ರಂದು ಮಾನ್ಯ ಮುಖ್ಯಮಂತ್ರಿ ಅವರಿಂದ ಭವ್ಯವಾಗಿ ಉದ್ಘಾಟನೆಯಾಗುತ್ತಿದೆ. ಇದು ಕೇವಲ ಗಡಿಯಾರ ಕಂಬವಲ್ಲ, ಈ ಊರಿನ ಬೆಳವಣಿಗೆಗೆ, ನಾಟೆಕಲ್ ಜನರ ಹೆಮ್ಮೆಗೆ ಮತ್ತು ಕಣಚೂರು ಮೋನು ಅವರ ದೃಷ್ಟಿ ಮೌಲ್ಯಗಳಿಗೆ ಪ್ರತೀಕ.

**ಕಾರ್ಯಕ್ರಮಕ್ಕೆ ಆಮಂತ್ರಿಸುವ**

**ಡಾ| ಹಾಜಿ ಯು.ಕೆ ಮೋನು ಕಣಚೂರು**
ಅಧ್ಯಕ್ಷರು, ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್

**ಅಬ್ದುಲ್ ರಹಿಮಾನ್**
ನಿರ್ದೇಶಕರು, ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್

**ಝೊಹರಾ ಮೋನು**
ಟ್ರಸ್ಟೀ, ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್

**ಉಮಯಾ ಬಾನು**
ಟ್ರಸ್ಟೀ, ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್

**ಫರೀದಾ ಬಾನು**
ಟ್ರಸ್ಟೀ, ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್

**ಡಾ. ಅಬೀದಾ ಬಾನು**
ಟ್ರಸ್ಟೀ, ಕಣಚೂರು ಇಸ್ಲಾಮಿಕ್ ಎಜ್ಯುಕೇಷನ್ ಟ್ರಸ್ಟ್



**ಕಣಚೂರು ಸಂಸ್ಥೆಗಳ ಸೇವಾ ವ್ಯಾಪ್ತಿ**

- Kanachur Public School
- Kanachur PU College for Women
- Kanachur Institute of Management & Science
- Kanachur Institute of Medical Sciences
- Kanachur College of Nursing & Allied Health Sciences
- Kanachur Institute of Physiotherapy
- Kanachur Modern healthcare services & charity initiatives

**ನಾಟೆಕಲ್‌ನಿಂದ ವಿಶ್ವದ ಮಟ್ಟಿಗೆ**

ವಿದೇಶಗಳಲ್ಲಿ ವ್ಯಾಪಿಸಿರುವ ಉದ್ಯಮಗಳ ಮೂಲಕ ಡಾ. ಯು.ಕೆ. ಮೋನು ಸಾವಿರಾರು ಮಂದಿಗೆ ಉದ್ಯೋಗಾವಕಾಶ ನೀಡುತ್ತಿದ್ದಾರೆ. ಅವರ ಜೀವನಪಾಠ "ಶ್ರಮ, ಮೌಲ್ಯ, ಮಾನವೀಯತೆ ಯಶಸ್ಸಿನ ನಿಜವಾದ ಕಿರೀಟ".

---

# ಭಾವಪೂರ್ಣ ಶ್ರದ್ಧಾಂಜಲಿ



## ಲಲಿತಾ ಡಿ. ಸುಂದರ್

(79 ವರ್ಷ)

ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ **ಲಲಿತಾ ಡಿ ಸುಂದರ್**, 1975ರ ತುರ್ತು ಪರಿಸ್ಥಿತಿಯ ಸಮಯದಲ್ಲೂ ಹೋರಾಟಗಾರರಿಗೆ ನೆರವಾಗಿದ್ದರು. ಮಹಿಳಾ ದೌರ್ಜನ್ಯಕ್ಕೆ ವಿರುದ್ಧ ಹೋರಾಡಿ ಅನೇಕ ಅಶಕ್ತ, ಬಡ ಮಹಿಳೆಯರಿಗೆ ನೆರವಾಗಿದ್ದರು. ಬಡ ಹೆಣ್ಣು ಮಕ್ಕಳ ವಿವಾಹ, ಅನಾರೋಗ್ಯ ಪೀಡಿತರಿಗೆ ಆರ್ಥಿಕ ನೆರವು, ಅಪಘಾತಕ್ಕೀಡಾದವರಿಗೆ ಸಹಾಯ ಹಸ್ತ ಚಾಚುವ ಮೂಲಕ ಸಮಾಜಮುಖಿಯಾಗಿ ತೊಡಗಿಸಿಕೊಂಡಿದ್ದರು. ತೊಕ್ಕೊಟ್ಟುವಿನ ಹೃದಯಭಾಗದಲ್ಲಿರುವ ತಮ್ಮ ಕಟ್ಟಡದಲ್ಲಿ ಅನೇಕ ವರ್ಷಗಳ ಕಾಲ **ಭಾರತೀಯ ಜನತಾ ಪಕ್ಷದ** ಕಚೇರಿಗಾಗಿ **ಉಚಿತವಾಗಿ** ಒದಗಿಸುತ್ತಾ ಬಂದಿದ್ದಾರೆ. **ಬಿಜೆಪಿ ಮಹಿಳಾ ಮೋರ್ಚಾ ದ.ಕ. ಘಟಕ, ಸಮುದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷೆ, ಜನ್ಮಭೂಮಿ ಸಹಕಾರಿ ಸಂಘದ ನಿರ್ದೇಶಕಿ** ಸೇರಿದಂತೆ ಹಲವು ಸಂಘಟನೆಗಳಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿದ್ದರು. ಸೇವಾ ಮನೋಭಾವದಿಂದ ಅವರು **ಪಕ್ಷದ ನಿಷ್ಠಾವಂತ ಕಾರ್ಯಕರ್ತೆ** ಎಂದು ಖ್ಯಾತರಾಗಿದ್ದರು. **ಉಳ್ಳಾಲ ಪುರಸಭೆಯ ಕೌನ್ಸಿಲರ್** ಆಗಿ ಆಯ್ಕೆಯಾಗಿ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಉಳ್ಳಾಲದ ವೀರರಾಣಿ ಅಬ್ಬಕ್ಕೋತ್ಸವ ಸಮಿತಿ, ಕೊಲ್ಯ ಶ್ರೀ ಶಾರದೋತ್ಸವ ಸಮಿತಿ, ಕುತ್ತಾರು ಶ್ರೀ ರಾಜರಾಜೇಶ್ವರಿ ಸಿದ್ಧಿವಿನಾಯಕ ಮಂದಿರ ಸಮಿತಿ ಮೊದಲಾದ ಸಂಸ್ಥೆಗಳಲ್ಲಿ ಸಕ್ರಿಯ ಸೇವೆ ಸಲ್ಲಿಸಿದ್ದರು. ತಮ್ಮ ತೊಕ್ಕೊಟ್ಟುವಿನ ಶ್ರೀ ರಾಘವೇಂದ್ರ ಫ್ಯಾನ್ಸಿ ಅಂಗಡಿಯಲ್ಲಿ **ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು** ವರ್ಷಗಳಿಂದ ನಿರಂತರವಾಗಿ ಮುಂದುವರೆಸಿದ ಕರುಣಾ ಹೃದಯಿ ಲಲಿತಾ ಸುಂದರ್ ಜನಸ್ನೇಹ ಮತ್ತು ಸೌಜನ್ಯದ ಪ್ರತಿರೂಪವಾಗಿದ್ದರು.

**ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುವ**

| | | | | |
|---|---|---|---|---|
| **ದಿವ್ಯಾ ಶೆಟ್ಟಿ**<br>ಅಧ್ಯಕ್ಷರು, ಕೋಟೆಕಾರು ಪಟ್ಟಣ ಪಂಚಾಯತ್ | **ಸುಮಲತಾ ಕೊಣಾಜೆ**<br>ಕೋಶಾಧಿಕಾರಿ, ಬಿಜೆಪಿ ಮಂಗಳೂರು ಮಂಡಲ | **ಸುಮನಾ ಹರೀಶ್ ಶೆಟ್ಟಿ**<br>ಉಪಾಧ್ಯಕ್ಷರು, ಬಿಜೆಪಿ ಮಂಗಳೂರು ಮಂಡಲ | **ಮಾಧವಿ ಉಳ್ಳಾಲ**<br>ಅಧ್ಯಕ್ಷರು, ಬಿಜೆಪಿ ಮಹಿಳಾ ಮೋರ್ಛಾ ಮಂಗಳೂರು ಮಂಡಲ | **ಜಯಶ್ರೀ ಕನೀರುತೋಟ**<br>ಕಾರ್ಯದರ್ಶಿ, ಬಿಜೆಪಿ ಮಹಿಳಾ ಮೋರ್ಚಾ ಮಂಗಳೂರು ಮಂಡಲ |
| **ಹೇಮ ರಾವ್ ತಲಪಾಡಿ**<br>ಸದಸ್ಯರು, ಬಿಜೆಪಿ ಮಹಿಳಾ ಮೋರ್ಚಾ ಮಂಗಳೂರು ಮಂಡಲ | **ಸುಜಾತಾ ಶೆಟ್ಟಿ ನಡಾರ್**<br>ಕಾರ್ಯಾಲಯ ಕಾರ್ಯದರ್ಶಿ, ಬಿಜೆಪಿ ಮಂಗಳೂರು ಮಂಡಲ | **ಹರಿಣಿ ವಿ. ಕೋಟ್ಯಾನ್**<br>ಪ್ರಧಾನ ಕಾರ್ಯದರ್ಶಿ, ಬಿಜೆಪಿ ಮಹಿಳಾ ಮೋರ್ಚಾ ಮಂಗಳೂರು ಮಂಡಲ | **ಸುರೇಖಾ ಅಜಿತ್**<br>ಕಾರ್ಯದರ್ಶಿ, ಬಿಜೆಪಿ ಮಂಗಳೂರು ಮಂಡಲ | **ಸತ್ಯವತಿ ಜಿ.ಕೆ ಉಳ್ಳಾಲ**<br>ಕಾರ್ಯದರ್ಶಿ, ಬಿಜೆಪಿ ಮಂಗಳೂರು ಮಂಡಲ |

Ullalavani, Printed & Published by Ravi Bangera on behalf of Karnartaka News Publications (Pvt) Goodshed Road, Bunder, Mangalore, published at : Appachi Complex, Kuthar, Munnur Post, Someshwar Village, Ullal Tq - 575 017, Mob : 9845478858.
RNI:KARKAN28322, Printed at Karnartaka News Publications (Pvt) Goodshed Road, Bunder, Mangalore. Editor: Mohan Kuthar.